25 September 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ನಮ್ಮ ವ್ಯಕ್ತಿತ್ವ ಹೆಚ್ಚು ಹಗುರವಾದರೆ ಹಾರಿ ಹೋಗುತ್ತದೆ, ಹಾಗಂತ ತುಂಬಾ ಭಾರವಾದರೆ ಮುಳುಗಿ ಹೋಗುತ್ತದೆ!

-ಸ್ನೇಹಾ ಆನಂದ್

ರಾಜ್ಯ ಸರ್ಕಾರದ ವಿರುದ್ಧ ಅಣಕು ಶವಯಾತ್ರೆ ಚಳವಳಿ ಪುಟ ಸಂ. 2

ದೊಡ್ಡರಾಯಪೇಟೆಯಲ್ಲಿ ಧಮ್ಮಪಯಣ ಜಾಥಗೆ ಸ್ವಾಗತ ಪುಟ ಸಂ. 3

ಚುನಾವಣಾ ಆಯುಕ್ತರ ಬಂಧಿಸಿ: ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ವಾಗ್ದಾಳಿ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 189 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ದಸರಾ ಉದ್ಘಾಟನೆಗೆ ಗವಿಸಿದ್ದೇಶ್ವರ ಶ್ರೀಗಳಿಗೆ ಆಹ್ವಾನ

ಬೆಂಗಳೂರು: ನಾಡಿನ ಸಾಂಸ್ಕೃತಿಕ ಹೆಮ್ಮೆಯ ಪ್ರತೀಕವಾದ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಕೊಪ್ಪಳದ ಶ್ರೀ ಗವಿ ಸಿದ್ದೇಶ್ವರ ಮಹಾಸಂಸ್ಥಾನ ಮಠದ ಪೀಠಾ ಧಿಪತಿ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಉದ್ಘಾಟಿಸುವರು.

ವಿಧಾನಸೌಧದಲ್ಲಿ ಗುರುವಾರ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಈ ಬಗ್ಗೆ ಪ್ರಕಟಿಸಿದರು. ಅಕ್ಟೋಬರ್ 11ರಿಂದ 21ರ ವರೆಗೆ ಒಟ್ಟು 11 ದಿನಗಳ ಕಾಲ ಅತ್ಯಂತ ವೈಭವದಿಂದ ದಸರಾ ಮಹೋತ್ಸವ ನಡೆಯಲಿದೆ.

ಚಾಮುಂಡಿ ಬೆಟ್ಟದಲ್ಲಿ ಅ.11ರಂದು ಭಾನುವಾರ ಶ್ರೀ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ದಸರಾ ಮಹೋತ್ಸ ವಕ್ಕೆ ವಿದ್ಯುಕ್ತ ಚಾಲನೆ ದೊರೆಯ ಲಿದೆ. ಅ.20ರಂದು ಸಾಂಪ್ರದಾಯಿಕ ಆಯುಧ ಪೂಜೆ ನಡೆಯಲಿದೆ. ಅ.21ರಂದು ಬುಧವಾರ ವಿಜಯದಶಮಿ ದಿನ ಜಂಬೂ ಸವಾರಿ ನಡೆಯಲಿದೆ. ಅಂದು ಸಂಜೆ ಬನ್ನಿಮಂಟಪದಲ್ಲಿ ಪಂಜಿನ ಕವಾಯತು ನಡೆಯಲಿದೆ. ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಹಾಸಂಸ್ಥಾನ ಮಠದ ಪ್ರಸ್ತುತ ಪೀಠಾಧಿಪತಿ ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ಮಠದ 18ನೇ ಪೀಠಾಧಿಪತಿಗಳು. ಸಮಾಜದ ಬಗ್ಗೆ ತಮಗೆ ಇರುವ ಅಭೂತಪೂರ್ವ ಸಾಮಾಜಿಕ ಕಳಾಕಳಿ, ಸರಳತೆ ಮತ್ತು ದಾಸೋಹ ಪರಂಪರೆ ಯಿಂದಾಗಿ ನಾಡಿನಾದ್ಯಂತ 'ನಡೆದಾಡುವ ದೇವರು' ಹಾಗೂ ಜಲಋಷಿ ಎಂದೇ ಅತ್ಯಂತ ಗೌರವದಿಂದ ಕರೆಯಲಾಗುತ್ತದೆ. 2002ರ ಡಿಸೆಂಬರ್ 13 ರಂದು ತಮ್ಮ ಪೂರ್ವಾಧಿಕಾರಿಗಳಾದ ಶ್ರೀ ಶಿವಶಾಂತವೀರಸ್ವಾಮಿಗಳ ಆಶೀ ರ್ವಾದದೊಂದಿಗೆ ಮಠದ ಪೀಠಾ ಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿ ದ್ದಾರೆ.

ಪುಟ 2ಕ್ಕೆ

20 ಟಿಎಂಸಿ ನೀರಿಗೆ ತ.ನಾಡು ಪಟ್ಟು

ಸುಪ್ರೀಂ ಕೋರ್ಟ್‌ನಲ್ಲಿ ವಾದ: ಕರ್ನಾಟಕದಿಂದ ಆಕ್ಷೇಪ ಸಲ್ಲಿಕೆ

ನವದೆಹಲಿ: ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಕರ್ನಾಟಕ ಮತ್ತು ತಮಿಳು ನಾಡು ನಡುವಿನ ವಾದ ಮತ್ತೆ ಸುಪ್ರೀಂ ಕೋರ್ಟ್ನಲ್ಲಿ ಪ್ರತಿಧ್ವನಿಸಿದೆ.

ತಮಿಳುನಾಡು ತನ್ನ ಪಾಲಿನ ನೀರಿ ನಲ್ಲಿ 20 ಟಿಎಂಸಿ ಕೊರತೆಯಾಗಿದೆ ಎಂದು ಆರೋಪಿಸಿ ಬೆಳೆ ನಷ್ಟದ ವಿಚಾರ ಪ್ರಸ್ತಾ ಪಿಸಿದೆ. ಕರ್ನಾಟಕ ತನ್ನ ಜಲಾನಯನ ಪ್ರದೇಶದಲ್ಲೇ ಬರ ಪರಿಸ್ಥಿತಿ ಇದೆ ಎಂದು ಅಳಲು ತೋಡಿಕೊಂಡಿದೆ. ನೀರಿನ ಕೊರ ತೆಯ ನಡುವೆಯೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ನಿರ್ದೇಶನ ದಂತೆ ನೀರು ಬಿಡುಗಡೆ ಮಾಡುತ್ತಿರು ವುದಾಗಿ ಕರ್ನಾಟಕ ತಿಳಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳ ಗೊಂಡ ಪೀಠ ಗುರುವಾರ ತಮಿಳುನಾ ಡಿನ ಅರ್ಜಿಯನ್ನು ವಿಚಾರಣೆ ನಡೆಸಿತು. ಈ ವೇಳೆ ಎರಡೂ ರಾಜ್ಯಗಳು ಕಾವೇರಿ ಜಲ ಲಭ್ಯತೆ ಮತ್ತು ನೀರು ಹಂಚಿಕೆ ಕುರಿತು ತಮ್ಮ ವಾದಗಳನ್ನು ಮಂಡಿಸಿದವು. ತಮಿಳುನಾಡಿನ ಪರ ವಕೀಲ ಸಿ.ಎಸ್. ವೈದ್ಯನಾಥನ್ ವಾದ ಮಂಡಿಸಿ, ನೀರಿನ ಕೊರತೆಯಿಂದ ರಾಜ್ಯದಲ್ಲಿ ಬೆಳೆ ನಷ್ಟವಾಗಿದೆ ಎಂದು ತಿಳಿಸಿದರು.

ಕರ್ನಾಟಕವು ಕಾವೇರಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದ ಅವರು, ಕಾವೇರಿ ನೀರು ಹಂಚಿಕೆ ವ್ಯವಸ್ಥೆಯನ್ನು ಜಾರಿಗೊಳಿಸು ವಂತೆ ನ್ಯಾಯಾಲಯದ ನಿರ್ದೇಶನ ಕೋರಿದರು.

ತಮಿಳುನಾಡಿನಲ್ಲಿ ನೀರಿನ ಕೊರತೆ ಎಷ್ಟಿದೆ ಎಂದು ನ್ಯಾಯಪೀಠ ಪ್ರಶ್ನಿಸಿ ದಾಗ, ರಾಜ್ಯವು ಕೊರತೆಯನ್ನು 20 ಟಿಎಂಸಿ ಎಂದು ಅಂದಾಜಿಸಿದೆ ಎಂದು ವೈದ್ಯನಾಥನ್ ತಿಳಿಸಿದರು. ಆದರೆ, ಕರ್ನಾ ಟಕ ನೀರಿನ ಕೊರತೆ 16 ಟಿಎಂಸಿ ಎಂದು ಹೇಳಿದೆ ಎಂದರು.

ಕಾವೇರಿ ನೀರು ನಿಯಂತ್ರಣ ಸಮಿತಿ ಹಾಗೂ ಕಾವೇರಿ ನೀರು

ಪುಟ 2ಕ್ಕೆ

ಬರ ಪರಿಹಾರ ಘೋಷಣೆ

2,500 ರೂ. ಜಮೆ ಮಾಡಲು ನಿರ್ಧಾರ: ಸಿಎಂ ಡಿಕೆಶಿ ಮಾಹಿತಿ

ಬೆಂಗಳೂರು: ಕರ್ನಾಟಕದಲ್ಲಿ ಬರ ಪರಿಸ್ಥಿತಿ ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ತಕ್ಷಣ ಆರ್ಥಿಕ ನೆರವು ನೀಡಲು ರಾಜ್ಯ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ರಾಜ್ಯದ ಸುಮಾರು 40 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಮೊದಲ ಹಂತವಾಗಿ ತಲಾ 2,500 ರೂಪಾಯಿಗಳನ್ನು ನೇರವಾಗಿ ಜಮೆ ಮಾಡಲು ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರದಿಂದ ಬರ ಪರಿಹಾರದ ಹಣ ಬಿಡುಗಡೆಯಾಗುವುದನ್ನು ಕಾಯದೆ, ರಾಜ್ಯ ಸರ್ಕಾರವೇ ತನ್ನ ಸಂಪನ್ಮೂಲಗಳಿಂದ ರೈತರಿಗೆ ತಾತ್ಕಾಲಿಕ ನೆರವು ನೀಡಲು ಮುಂದಾಗಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ತೀರ್ಮಾನ ತೆಗೆದು ಕೊಳ್ಳಲಾಗಿದೆ. ರೈತರ ಖಾತೆಗೆ 2,500 ರೂಪಾಯಿ ಹಾಕುವುದಾಗಿ ಸಿಎಂ ಡಿಕೆ ಶಿವಕುಮಾರ್ ಅಧಿಕೃತವಾಗಿ ಘೋಷಿಸಿದ್ದಾರೆ.

ಇದರಿಂದ ಬರ ಹಾಗೂ ಸಂಕಷ್ಟದಿಂದ ತೊಂದರೆಗೊಳಗಾಗಿರುವ ರೈತರಿಗೆ ಸರ್ಕಾರದ ಕಡೆಯಿಂದ ತಾತ್ಕಾಲಿಕ ಸಾಂತ್ವನದ ನೆರವಾಗ ಲಿದೆ. 40 ಲಕ್ಷ ರೈತರಿಗೆ ಹಣ ಜಮೆಯಾಗಲಿದೆ.

ಕೇಂದ್ರದಿಂದ ಹಣಕಾಸಿನ ನೆರವು ಬಂದ ಬಳಿಕ ಮತ್ತೆ ಸರ್ಕಾರ ಹಣ ಹಾಕಲಿದೆ. ರಾಜ್ಯ ಸರ್ಕಾರದಿಂದ 2,500 ನೆರವು ನೀಡಿದ ಬಳಿಕ ಕೇಂದ್ರ ಸರ್ಕಾರದಿಂದ ಬರ ಪರಿಹಾರದ ಹಣ ಬಿಡುಗಡೆ ಯಾದರೆ, ನಿಯಮಾನುಸಾರ ರೈತರಿಗೆ ಮತ್ತಷ್ಟು ಪರಿ ಹಾರ ನೀಡುವ ಸಾಧ್ಯತೆಯ ಬಗ್ಗೆಯೂ ಚರ್ಚೆ ನಡೆದಿದೆ.

ಈ ಪ್ರಸ್ತಾವನೆಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲು ಸರ್ಕಾರ ನಿರ್ಧರಿಸಿದೆ ಎಂದು ತಿಳಿದುಬಂದಿದೆ. ಸಂಪುಟದ ಒಪ್ಪಿಗೆ ದೊರೆತ ಬಳಿಕ ಅರ್ಹ ರೈತರ ಸಂಖ್ಯೆ, ಹಣಕಾಸಿನ ಒಟ್ಟು ಹೊರೆ ಹಾಗೂ ಹಣ ಜಮಾ ಮಾಡುವ ಪ್ರಕ್ರಿಯೆ ಸೇರಿದಂತೆ ವಿವರಗಳನ್ನು ಸರ್ಕಾರ ಪ್ರಕಟಿಸುವ ಸಾಧ್ಯತೆ ಇದೆ.

ಬರ ಪಟ್ಟಿಗೆ ಮತ್ತೆ 29 ತಾಲೂಕು ಸೇರ್ಪಡೆ

ಬೆಂಗಳೂರು: ರಾಜ್ಯದಲ್ಲಿ ಬರ ಪರಿಸ್ಥಿತಿ ವೈಜ್ಞಾ ನಿಕ ಮೌಲ್ಯಮಾಪನ ನಿರಂತರವಾಗಿ ನಡೆಯು ತ್ತಿದೆ. ಈವರೆಗೆ 177 ತಾಲೂಕುಗಳನ್ನು ಬರ ಪೀಡಿತ ಎಂದು ಘೋಷಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ್ ತಿಳಿಸಿದರು.

ಇದರ ಮುಂದುವರಿದ ಭಾಗವಾಗಿ, ಮಳೆ ಪ್ರಮಾಣ, ಮಣ್ಣಿನ ತೇವಾಂಶ, ಬೆಳೆ ಸ್ಥಿತಿ ಸೇರಿದಂತೆ ವಿವಿಧ ವೈಜ್ಞಾನಿಕ ಮಾನ ದಂಡ ಗಳನ್ನು ಆಧರಿಸಿ 5ನೇ ಹಂತದಲ್ಲಿ 10 ಜಿಲ್ಲೆಗಳ 29 ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಇನ್ನೂ ಕೆಲವು ತಾಲೂಕುಗ ಳಲ್ಲಿ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿ, ಪಾರ ದರ್ಶಕ ಸಮೀಕ್ಷೆ ಹಾಗೂ ನಿಖರ ವರದಿಯ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಜ್ಞಾನೇಶ್ ಕುಮಾರ್ ವಿರುದ್ಧ ಮಹಾಭಿಯೋಗ?

ಮುಖ್ಯ ಚುನಾವಣಾ ಆಯುಕ್ತರ ಕೆಳಗಿಳಿಸಲು ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳ ಸಿದ್ಧತೆ

ನವದೆಹಲಿ: ಕೇಂದ್ರ ಚುನಾವಣಾ ಆಯೋ ಗದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಹೊಸದಾಗಿ ಮಹಾಭಿ ಯೋಗ ನಿರ್ಣಯ ಮಂಡಿಸಲು ಪ್ರತಿಪಕ್ಷ ಗಳು ಸಿದ್ಧತೆ ನಡೆಸಿವೆ.

ಈ ಪ್ರಕ್ರಿಯೆಯಲ್ಲಿ ಕಾಂಗ್ರೆಸ್ ಮುಂಚೂ ಣಿಯಲ್ಲಿದೆ. ಈ ನಿರ್ಣಯಕ್ಕೆ ಸಂಬಂಧಿಸಿದ ನೋಟಿಸ್ ಅನ್ನು ಸಿದ್ಧಪಡಿಸಲಾಗುತ್ತಿದ್ದು, ಮುಂದಿನ ವಾರವೇ ಸಂಸತ್ತಿನಲ್ಲಿ ಸಲ್ಲಿಸುವ ಸಾಧ್ಯತೆ ಯಿದೆ. ಇಂಡಿಯಾ ಮೈತ್ರಿಕೂಟದ ಪಕ್ಷಗಳ ನಡುವೆ ಈ ಕುರಿತು ಒಮ್ಮತ ಮೂಡಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ

ಮತದಾರರ ಪಟ್ಟಿ ಪರಿಷ್ಕರಣೆ ಸೇರಿ ದಂತೆ ಚುನಾವಣಾ ಆಯೋಗದ ಹಲವು ಆದೇಶ ಹಾಗೂ ನಿರ್ಧಾರಗಳಿಗೆ ಸಂಬಂಧಿಸಿ ದಂತೆ, ಚುನಾವಣಾ ಆಯುಕ್ತರಾದ ಸುಖ್ ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಕನಿಷ್ಠ 14 ಬಾರಿ ಅಧಿಕೃತ ಆಕ್ಷೇಪಣೆಗಳನ್ನು ಎತ್ತಿದ್ದರು ಎಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾದ ಬೆನ್ನಲ್ಲೇ ಪ್ರತಿಪಕ್ಷಗಳು ಈ ಕ್ರಮಕ್ಕೆ ಮುಂದಾಗಿವೆ.

ಆಯೋಗದಲ್ಲಿ ಯಾವುದೇ ಭಿನ್ನಾಭಿಪ್ರಾ ಯಗಳಿಲ್ಲ. ಕಳೆದ ಒಂದು ವರ್ಷದಲ್ಲಿ ಎಸ್ ಐಆರ್ ಸೇರಿದಂತೆ ಕೈಗೊಂಡ ಎಲ್ಲಾ ನಿರ್ಧಾ ರಗಳನ್ನು ಒಮ್ಮತದಿಂದಲೇ ತೆಗೆದುಕೊಳ್ಳಲಾ ಗಿದೆ ಎಂದು ಚುನಾವಣಾ ಆಯೋಗ ಸ್ಪಷ್ಟಪಡಿಸಿದೆ.

ಸಿಇಸಿ ವಿರುದ್ಧ ದೂರು ಮೊದಲ ಬಾರಿಗೆ ಅಲ್ಲ

ಜ್ಞಾನೇಶ್ ಕುಮಾರ್ ಅವರ ವಿರುದ್ಧ ಪ್ರತಿಪಕ್ಷಗಳು ಮಹಾಭಿಯೋಗ ಪ್ರಕ್ರಿಯೆ ಆರಂಭಿಸಲು ಮುಂದಾಗಿರುವುದು ಇದೇ ಮೊದಲೇನಲ್ಲ. ಈ ಹಿಂದೆ ಏಪ್ರಿಲ್ 24ರಂದು ರಾಜ್ಯಸಭೆಯ 73 ಪ್ರತಿಪಕ್ಷ ಸಂಸದರು ದುರ್ನಡತೆಯ ಆಧಾರದ ಮೇಲೆ ಅವರನ್ನು ಹುದ್ದೆಯಿಂದ ವಜಾಗೊಳಿಸುವಂತೆ ಕೋರಿ ನೋಟಿಸ್ ನೀಡಿದ್ದರು. ಇದರಲ್ಲಿ ಒಂಬತ್ತು ನಿರ್ದಿಷ್ಟ ಆರೋಪಗಳನ್ನು ಉಲ್ಲೇಖಿಸಲಾಗಿತ್ತು. ಈ ನೋಟಿಸ್ ಇನ್ನೂ ಬಾಕಿ ಉಳಿದಿದೆ. ಈ ಹಿಂದೆ ಸಹಿ ಮಾಡಿದ್ದ 73 ಸಂಸದ ರಲ್ಲಿ ಏಳು ಮಂದಿ ಈಗ ಬೇರೆ ಪಕ್ಷಗ ಳಿಗೆ ಪಕ್ಷಾಂತರಗೊಂಡಿ ದ್ದಾರೆ. ಈ ಹಿನ್ನೆಲೆಯಲ್ಲಿ, ಸದನದ ಪ್ರಸ್ತುತ ಬಲಾ ಬಲ ಹಾಗೂ ಇತ್ತೀಚಿನ ಬೆಳವಣಿಗೆಗ ಳನ್ನು ಸೇರಿಸಿ ಹೊಸ ನೋಟಿಸ್ ಸಿದ್ಧಪ ಡಿಸಲಾಗುತ್ತಿದೆ. ಇದಕ್ಕೂ ಮೊದಲು ಮಾರ್ಚ್‌ನಲ್ಲಿ ಎರಡೂ ಸದನಗಳಲ್ಲಿ ನೀಡ ಲಾಗಿದ್ದ ನೋಟಿಸ್‌ಗಳನ್ನು ಏಪ್ರಿಲ್ 6ರಂದು ರಾಜ್ಯಸಭಾ ಸಭಾಪತಿ ಮತ್ತು ಲೋಕಸಭಾ ಸ್ಪೀಕರ್ ತಿರಸ್ಕರಿಸಿದ್ದರು.

ಪದಚ್ಯುತಿ ಪ್ರಕ್ರಿಯೆ ಹೇಗೆ?

ಮುಖ್ಯ ಚುನಾವಣಾ ಆಯುಕ್ತರನ್ನು ಹುದ್ದೆ ಯಿಂದ ತೆಗೆದುಹಾಕುವ ಪ್ರಕ್ರಿಯೆಯು ಸುಪ್ರೀಂ ಕೋರ್ಟ್ ನ್ಯಾಯಾಧೀಶರನ್ನು ವಜಾಗೊಳಿಸುವ ನಿಯಮಗಳನ್ನೇ ಹೋಲುತ್ತದೆ. ಈ ಪ್ರಕ್ರಿಯೆ ಆರಂಭಿಸಲು ಸಂಸತ್ತಿನಲ್ಲಿ ನಿಗದಿತ ಸಂಖ್ಯೆಯ ಸದಸ್ಯರ ಬೆಂಬಲ ಬೇಕಾಗುತ್ತದೆ. ನೋಟಿಸ್ ಅಂಗೀಕಾರವಾದರೆ ತನಿಖೆ ನಡೆಯಲಿದೆ. ಅಂತಿಮವಾಗಿ ಸಂಸತ್ತಿನಲ್ಲಿ ವಿಶೇಷ ಬಹುಮತದ ಮೂಲಕವಷ್ಟೇ ಅವರನ್ನು ಹುದ್ದೆಯಿಂದ ತೆಗೆದುಹಾಕಲು ಸಾಧ್ಯ.

ಕಾವೇರಿ: ರಾಜ್ಯಕ್ಕೆ ಮತ್ತೆ ಅನ್ಯಾಯ

ತಮಿಳುನಾಡಿಗೆ ನಿತ್ಯ 4 ಸಾವಿರ ಕ್ಯೂಸೆಕ್ ನೀರು ಹರಿಸಲು ಸೂಚನೆ

ನವದೆಹಲಿ: ತಮಿಳುನಾಡಿಗೆ ನಿತ್ಯ 4 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಮಂಡಳಿ ಕರ್ನಾಟಕ ರಾಜ್ಯಕ್ಕೆ ಗುರುವಾರ ಆದೇಶಿಸಿದೆ.

ಗುರುವಾರ ನಡೆದ ಮಂಡಳಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಮುಂದಿನ 15 ದಿನಗಳ ಕಾಲ ನೀರು ಹರಿಸಬೇಕು ಎಂದು ಮಂಡಳಿ ಸೂಚಿಸಿದೆ.

ಪ್ರತಿದಿನ 6 ಸಾವಿರ ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸೆಪ್ಟೆಂಬರ್ 8ರಂದು ನಿರ್ದೇಶನ ನೀಡಿತ್ತು. ರಾಜ್ಯದ ಬರ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದು ಕೊಳ್ಳದೇ ಪ್ರಾಧಿಕಾರ ಈ ನಿರ್ದೇಶನ ನೀಡಿದೆ ಎಂದು ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು.

ಈ ಸಂಬಂಧ ಜಲಸಂಪನ್ಮೂಲ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಇದೇ 15ರಂದು

ಪುಟ 2ಕ್ಕೆ

ಸುಪ್ರೀಂ ಕೋರ್ಟ್ಗೆ ಮೇಲ್ಮನವಿ: ಡಿಕೆಶಿ

ಚಿತ್ರದುರ್ಗ: ತಮಿಳುನಾಡಿಗೆ ಕಾವೇರಿ ನೀರು ಬಿಡುವ ವಿಚಾರ ವಾಗಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ಗೆ ಮೇಲ್ಮನವಿ ಸಲ್ಲಿಸಲಿದೆ ಎಂದು ಮುಖ್ಯ

ಪುಟ 2ಕ್ಕೆ

ಭೀಕರ ಅಪಘಾತ: ಮೂವರು ಸಾವು

ಕೋಲಾರ: ಕೋಲಾರ ಜಿಲ್ಲೆಯ ಬಂಗಾರ ಪೇಟೆ ತಾಲೂಕಿನ ಮರಗಲ್ ಬಳಿ ಚೆನ್ನೈ–ಬೆಂಗಳೂರು ಎಕ್ಸ್‌ಪ್ರೆಸ್ ಹೆದ್ದಾರಿ ಬಳಿ ಭೀಕರ ಅಪಘಾತ ಸಂಭವಿಸಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅತಿ ವೇಗವಾಗಿ ಚಲಿಸುತ್ತಿದ್ದ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಭೀಕರ ಅಪಘಾತದಲ್ಲಿ ಮೂವರು ಸ್ಥಳ ದಲ್ಲೇ ಮೃತಪಟ್ಟಿದ್ದಾರೆ. ಇಬ್ಬರು ಗಂಭೀರ ವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ರಭಸಕ್ಕೆ

ಪುಟ 2ಕ್ಕೆ



ಸೆ.28ಕ್ಕೆ ಮಾಫಿ ಸಾಕ್ಷಿ ದಾಖಲು

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರದೋಷ್ ಮಾಫಿ ಸಾಕ್ಷಿ ದಾಖಲಿಸಲು ಸೆ.28ಕ್ಕೆ ಕೋರ್ಟ್ ದಿನಾಂಕ ನಿಗದಿ ಮಾಡಿದೆ.

ಪ್ರದೂಷ್ ಮಾಫಿ ಸಾಕ್ಷಿ ತಡೆಯಲು ದರ್ಶನ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿ ಸಿದ ಬೆನ್ನಲ್ಲೇ, ಮಾಫಿ ಸಾಕ್ಷಿ ದಾಖಲಿಸಲು 59ನೇ ಸೆಷನ್ಸ್ ಕೋರ್ಟ್ ಆದೇಶ ನೀಡಿದೆ. ಕೋರ್ಟ್ ಆದೇ ಶದ ಬೆನ್ನಲ್ಲೇ ದರ್ಶನ್‌ಗೆ ಸಂಕಷ್ಟ ಎದುರಾಗಿದೆ.

ಮಾಫಿ ಸಾಕ್ಷಿ ಹೇಳಿಕೆ ದಿನಾಂಕ ನಿಗದಿ ಬೆನ್ನಲ್ಲೇ, ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್ಗೆ ದರ್ಶನ್ ಮೇಲ್ಮನವಿ ಸಲ್ಲಿಸಲು ಮುಂದಾಗಿದ್ದಾರೆ. ಈ ಬಗ್ಗೆ ದರ್ಶನ್ ಪರ ವಕೀಲರು, ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಕೆ ಮಾಡಲು ನಿರ್ಧರಿಸಿ ದ್ದೇವೆ ಎಂದು ವಿಚಾರಣಾ

ಪುಟ 2ಕ್ಕೆ

ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಡಿಕೆಶಿ ಆಗ್ರಹ

ಬೆಂಗಳೂರು: ಪ್ರಜಾಪ್ರಭುತ್ವ ಮತ್ತು ನಾಗರಿಕರ ಮತದಾನದ ಹಕ್ಕು ರಕ್ಷಿಸುವ ನಿಟ್ಟಿನಲ್ಲಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ತಕ್ಷಣ ರಾಜೀನಾಮೆ ನೀಡಬೇಕು ಎಂದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ರದ್ದುಪಡಿಸಿ ಮತದಾರರ ದತ್ತಾಂಶವನ್ನು ಹೊಸದಾಗಿ ಪರಿ

ಲೆಫ್ಟಿನೆಂಟ್ ವಿಶ್ವಾಸ್ ಬೋರೇಗೌಡರಿಗೆ ಗೌರವ ಸಮರ್ಪಣೆ

ಮಂಡ್ಯ: ಅವಕಾಶವನ್ನು ಬಳಸಿಕೊಳ್ಳುವವರು ಅದೃಷ್ಟವಂತರು, ಅವಕಾಶವನ್ನು ಸೃಷ್ಟಿಸಿಕೊಳ್ಳುವವರು ಜ್ಞಾನಿಗಳು ಎಂದು ಕೆಂಗೇರಿ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀಡಾ.ನಿಶ್ಚಲಾನಂದನಾಥ ಸ್ವಾಮೀಜಿಯವರು ನುಡಿದರು.

ನಗರದ ಕರ್ನಾಟಕ ಸಂಘದ ಕೆವಿ ಶಂಕರಗೌಡ ಶತಮಾನೋತ್ಸವ ಭವನದಲ್ಲಿ ವಿಶ್ವಮಾನವ ಸೇವಾ ಪ್ರತಿಷ್ಠಾನ ,ವಿಶ್ವೇಶ್ವರಯ್ಯ ಬಡಾವಣೆ ನಾಗರಿಕರ ಬಳಗ ಯೋಧ ಭೂಸೇನಾ ಲೆಫ್ಟಿನೆಂಟ್ ವಿಶ್ವಾಸ್ ಬೋರೇಗೌಡ ಅವರ ಅಭಿನಂದನಾ ಸಮಾರಂಭದಲ್ಲಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.

ರಾಷ್ಟ್ರವೇ ದೇವರು ಎಂಬ ತತ್ವವನ್ನು ಅಳವಡಿಸಿಕೊಂಡಿರುವುದು ಅನುಕರಣೀಯ . ವಿಶ್ವಾಸ್ ಬೋರೇಗೌಡ ಅವರು ಭಾರತೀಯ ಭೂಸೇನೆಯಲ್ಲಿ ಮುಂದುವರಿದು ಅತ್ಯುನ್ನತ ನಾಯಕತ್ವವನ್ನು ಅಲಂಕರಿಸಬೇಕು ಎಂದು ಹರಸಿದರು. ಅಗ್ರ ಸಾಲಿನಲ್ಲಿ ನಿಲ್ಲುವ ಅವಕಾಶವು ದೈವ ಕರುಣೆಯ ಸೌಭಾಗ್ಯವಾಗಿದ್ದು, ತಂದೆ ತಾಯಿಯ ಪೋಷಣೆ ಮತ್ತು ಹರಕೆಯೇ ಸಾಧನೆಗೆ ಮೂಲ ಕಾರಣ ಎಂದು ತಿಳಿಸಿದರು. ಸೇವಾವಧಿಯ

ನಂತರ ಆಡಳಿತ ಸೇವೆಗೆ ಮರಳುವ ಆಲೋಚನೆಯನ್ನು ಕೈಬಿಟ್ಟು ಸೇನೆಯಲ್ಲಿಯೇ ಮುಂದುವರಿಯುವಂತೆ ಮನವಿ ಮಾಡಿದರು. ಬುದ್ಧಿ ಸಾಮರ್ಥ್ಯವನ್ನು ಸೇನೆಯ ಕುಶಲತೆ ಹೆಚ್ಚಳಕ್ಕೆ, ಸಾವು ನೋವುಗಳ ಇಳಿಕೆಗೆ ಮತ್ತು ಶಾಂತಿ ಸ್ಥಾಪನೆಗೆ ಬಳಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜಿಪಂ ಸಿಒ ಕೆ. ಆರ್. ನಂದಿನಿ ಅವರು ಮಾತನಾಡಿ, ವಿಶ್ವಾಸ್ ಅವರು ತಂದೆ ತಾಯಿಗೆ ಮಾತ್ರವಲ್ಲದೆ ಇಡೀ ಮಂಡ್ಯ ಜಿಲ್ಲೆಯ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದ್ದಾರೆ ಎಂದು ಶ್ಲಾಘಿಸಿದರು. ಎಳೆಯ ವಯಸ್ಸಿನಲ್ಲಿಯೇ ಪ್ರಬುದ್ಧತೆಯನ್ನು ಮೈಗೂಡಿಸಿಕೊಂಡಿರುವುದು ಯುವಜನರಿಗೆ ಸ್ಫೂರ್ತಿದಾಯಕವಾಗಿದೆ ಎಂದರು. ವಯಸ್ಸು ವ್ಯಕ್ತಿಯ ಘನತೆ ಗೌರವವನ್ನು ನಿರ್ಧರಿಸುವುದಿಲ್ಲ, ದೇಶಸೇವೆಗೆ ಸಮರ್ಪಣೆಗೆ ವಯಸ್ಸು ಅಡ್ಡಿಯಲ್ಲ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ನಿವೃತ್ತ ಯೋಧ ಅಶ್ವಥ್ ಕುಮಾರ್ ಅವರು ಮಾತನಾಡಿ, ಪಡೆಯಲ್ಲಿ ವೈದ್ಯರು, ಹಲವು ಬಗೆಯ ತಂತ್ರಜ್ಞರು ಸೇರಿದಂತೆ ಸಾವಿರಾರು ಉದ್ಯೋಗ ಅವಕಾಶಗಳಿವೆ ಎಂದು ವಿವರಿಸಿದರು. ಹೆದ್ದಾರಿ ತಂತ್ರಜ್ಞಾನದಲ್ಲಿ ಪರಿಣಿತಿ ಪಡೆದು ಗಡಿ ರಸ್ತೆ ಸಂಘಟನೆಯಲ್ಲಿ ಸೇವೆ ಸಲ್ಲಿಸಿದ ತಮ್ಮ ಅನುಭವವನ್ನು ಹಂಚಿಕೊಂಡರು. . ಪಡೆಯಿಂದ ಹೊರಬರುವ ಯುವಕರು ಇನ್ನೂ ಇಪ್ಪತ್ತು ಇಪ್ಪತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸುವ ಶಕ್ತಿ, ಬದ್ಧತೆ, ಸಮಯಪಾಲನೆಯನ್ನು ಹೊಂದಿರುತ್ತಾರೆ, ಅವರನ್ನು ಸರಿಯಾಗಿ ಬಳಸಿಕೊಂಡರೆ ದೇಶಕ್ಕೆ ದೊಡ್ಡ ಕೊಡುಗೆ ನೀಡಬಲ್ಲರು ಎಂದು ಹೇಳಿದರು. ನಿವೇಶನಕ್ಕಾಗಿ, ನಿವೃತ್ತಿ ಭತ್ಯೆಗಾಗಿ ಕೇಳುತ್ತಿಲ್ಲ, ಸಮಾಜ ನೀಡುವ ಗೌರವವೇ ದೊಡ್ಡ ತೃಪ್ತಿ ಎಂದು ಭಾವುಕರಾಗಿ ನುಡಿದರು. ಸಮಾರಂಭದಲ್ಲಿ ಜೀವಧಾರೆ ಟ್ರಸ್ಟ್ ಅಧ್ಯಕ್ಷ ನಟರಾಜು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ ಎನ್ ರಾಘವೇಂದ್ರ ಯೋಧ ವಿಶ್ವಾಸ್ ಬೋರೇಗೌಡ ಅವರ ತಂದೆ ಕೆಆರ್ ಬೋರೇಗೌಡ ತಾಯಿ ರಮ್ಯಾ ಹಾಜರಿದ್ದರು

ನಿರಂತರ ಕಲಿಕೆಯೇ ಇತರರಿಂದ ಭಿನ್ನವಾಗಿಸುತ್ತದೆ

ಸನ್ಮಾನ ಸ್ವೀಕರಿಸಿ ಮಾತನಾಡಿದ ಯೋಧ ವಿಶ್ವಾಸ್ ಬೋರೇಗೌಡ ಅವರು, ಅಧಿಕಾರಿ ಮತ್ತು ಯೋಧರ ನಡುವಿನ ಮುಖ್ಯ ವ್ಯತ್ಯಾಸವು ತಿಳುವಳಿಕೆಯ ಮಟ್ಟದಲ್ಲಿದೆ ಎಂದು ಪ್ರತಿಪಾದಿಸಿದರು. ಕಲಿಯುವವರು ಪಠ್ಯದ ಜ್ಞಾನದ ಜೊತೆಗೆ ಸಮಾಜ, ದೇಶ, ನೆಲದ ರಾಜಕೀಯ ಮತ್ತು ಆಡಳಿತದ ಕುರಿತು ವ್ಯಾಪಕ ಅರಿವು ಗಳಿಸಬೇಕು ಎಂದು ಕರೆ ನೀಡಿದರು. ನಿರಂತರ ಕಲಿಕೆಯೇ ವ್ಯಕ್ತಿಯನ್ನು ಇತರರಿಂದ ಭಿನ್ನವಾಗಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಮೊದಲ ಪುಟದಿಂದ

ನೀರಿಗೆ ತ.ನಾಡು ಪಟ್ಟು

ನಿರ್ವಹಣಾ ಪ್ರಾಧಿಕಾರವು ನೀರಿನ ಕೊರತೆಯನ್ನು ಸಮರ್ಪಕವಾಗಿ ಪರಿಹರಿಸಲು ವಿಫಲವಾಗಿವೆ ಎಂದು ತಮಿಳುನಾಡು ಆರೋಪಿಸಿತು. ಕೊರತೆ ಇರುವ ನೀರನ್ನು ಪೂರೈಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕೆಂದು ಮನವಿ ಮಾಡಿತು.

ಇದಕ್ಕೆ ಕರ್ನಾಟಕ ಆಕ್ಷೇಪ ವ್ಯಕ್ತಪಡಿಸಿತು. ಕರ್ನಾಟಕದ ಪರ ಹಿರಿಯ ವಕೀಲ ಶ್ಯಾಮ್ ದಿವಾನ್ ಅವರು ವಾದ ಮಂಡಿಸಿ, ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರದಂತಹ ಪರಿಸ್ಥಿತಿ ಇದೆ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ನೀರಿನ ಅಭಾವದ ನಡುವೆಯೂ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ನೀಡಿರುವ ನಿರ್ದೇಶನಗಳಿಗೆ ಅನುಗುಣವಾಗಿ ನೀರು ಬಿಡುಗಡೆ ಮುಂದುವರಿಸಲಾಗಿದೆ. ಇದು ನಮಗೆ ಕಠಿಣ ಪರಿಸ್ಥಿತಿಯಾಗಿದೆ. ಆದರೂ ನಾವು ನಿರ್ದೇಶನಗಳನ್ನು ಪಾಲಿಸುತ್ತಿದ್ದೇವೆ ಎಂದು ದಿವಾನ್ ತಿಳಿಸಿದರು.

ಕರ್ನಾಟಕದಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇಲ್ಲ. ಆದರೆ, ತಮಿಳುನಾಡಿಗೆ ಈಶಾನ್ಯ ಮುಂಗಾರು ಮಳೆಯ ಲಾಭ ದೊರೆಯಲಿದೆ ಎಂದು ತಿಳಿಸಿದರು.

ಕರ್ನಾಟಕ ಈಗಾಗಲೇ 6,000 ಕ್ಯುಸೆಕ್ ನೀರನ್ನು ಬಿಡುಗಡೆ ಮಾಡಿರುವುದನ್ನು ನ್ಯಾಯಪೀಠ ಗಮನಿಸಿತು. ತಮಿಳುನಾಡಿನ ವಿಚಾರವನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವೇ ಪರಿಶೀಲಿಸಬೇಕಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ತಮಿಳುನಾಡು ಸಲ್ಲಿಸಿರುವ ಅರ್ಜಿಗೆ ಕರ್ನಾಟಕದ ಪ್ರತಿಕ್ರಿಯೆ ಪಡೆಯಲು ಸುಪ್ರೀಂ ಕೋರ್ಟ್ ಸೂಚಿಸಿದೆ. ಪ್ರಕರಣದ ಮುಂದಿನ ವಿಚಾರಣೆಯನ್ನು ಅಕ್ಟೋಬರ್ 12ಕ್ಕೆ ಮುಂದೂಡಿತು.

ತಮಿಳುನಾಡು ಆಗಸ್ಟ್ 3ರಂದು ಸುಪ್ರೀಂ ಕೋರ್ಟ್ನ್ನು ಸಂಪರ್ಕಿಸಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಜುಲೈ 30ರಂದು ನೀಡಿದ್ದ ನಿರ್ದೇಶನದಂತೆ ಕರ್ನಾಟಕ 15 ದಿನಗಳ ಕಾಲ ಪ್ರತಿದಿನ 3,500 ಕ್ಯುಸೆಕ್ ಕಾವೇರಿ ನೀರನ್ನು ಬಿಡುಗಡೆ ಮಾಡುವಂತೆ ಆದೇಶಿಸಲಾಗಿತ್ತು. ಆದರೆ, ಈ ನಿರ್ದೇಶನ ಜಾರಿಯಾಗಿಲ್ಲ ಎಂದು ಆರೋಪಿಸಿ ತಮಿಳುನಾಡು ಅರ್ಜಿ ಸಲ್ಲಿಸಿತ್ತು.

ಕಾವೇರಿ ನೀರು ಹಂಚಿಕೆ ವಿಚಾರ ಪರಿಹರಿಸಿ, ನಿಗದಿತ ಅವಧಿಯಲ್ಲಿ ತಮಿಳುನಾಡಿಗೆ ಅದರ ಪಾಲಿನ ನೀರು ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ತಮಿಳುನಾಡು ಸುಪ್ರೀಂ ಕೋರ್ಟ್ನಲ್ಲಿ ಮನವಿ ಮಾಡಿದೆ.

ಅಪಘಾತ: ಮೂವರು ಸಾವು

ಕಾರು ಸಂಪೂರ್ಣ ನಜ್ಜುಗುಜ್ಜಾಗಿದ್ದು, ಮೃತರು ಹಾಗೂ ಗಾಯಾಳುಗಳು ಪುಣೆ ಮೂಲದವರು ಎನ್ನಲಾಗಿದೆ. ಘಟನೆಯಲ್ಲಿ ಮತ್ತಿಬ್ಬರ ಸ್ಥಿತಿ ಗಂಭೀರವಾಗಿದೆ. ಅವರನ್ನು ಕೋಲಾರ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಬಂಗಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಪ್ರೀಂ ಮೇಲ್ಮನವಿ: ಡಿಕೆಶಿ

ಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದರು. ಚಿತ್ರದುರ್ಗದಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೀರಿದ್ದರೆ ಬಿಡುತ್ತೇವೆ. ಆದರೆ ನಮಗೂ ಒಳಹರಿವು ನಿಂತುಹೋಗಿದೆ. ಮಳೆ ಕೂಡ ನಿಂತಿದೆ. ಈ ವಿಚಾರದಲ್ಲಿ ನಮ್ಮ ಮೇಲೆ ಸಾಕಷ್ಟು ಒತ್ತಡವಿದೆ. ನೀರಿನ ಪರಿಸ್ಥಿತಿಯನ್ನು ಪರಿಶೀಲಿಸಿ, ನೀರಾವರಿ ಸಚಿವರೊಂದಿಗೆ ಚರ್ಚಿಸಿದ ಬಳಿಕ ಮುಂದಿನ ಕ್ರಮದ ಬಗ್ಗೆ ತಿಳಿಸುತ್ತೇನೆ ಎಂದು ಹೇಳಿದರು.

ಕಾವೇರಿ: ರಾಜ್ಯಕ್ಕೆ ಮತ್ತೆ ಅನ್ಯಾಯ

ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿ, ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ ಪ್ರಸ್ತುತ 55 ಟಿಎಂಸಿ ಅಡಿ ನೀರಿದೆ. ಒಂದು ತಿಂಗಳಲ್ಲಿ ಜಲಾಶಯಗಳಿಗೆ ಒಳಹರಿವು ಪ್ರಮಾಣ ಶೇ 87ರಷ್ಟು ಕಡಿಮೆ ಆಗಿದೆ. ಪ್ರಸ್ತುತ ಒಳಹರಿವು ಪ್ರಮಾಣ ಕೇವಲ 3 ಸಾವಿರ ಕ್ಯುಸೆಕ್‌ಗಳಷ್ಟು ಇದೆ ಎಂದು ಗಮನ ಸೆಳೆದಿದ್ದರು. ಆದರೂ ಕರ್ನಾಟಕದ ಮನವಿಯನ್ನು ಪರಿಗಣಿಸದ ಮಂಡಳಿ ನೀರು ಹರಿಸಲು ಸೂಚಿಸಿದೆ.

ಸೆ.28ಕ್ಕೆ ಮಾಫಿ ಸಾಕ್ಷಿ ದಾಖಲು

ನ್ಯಾಯಾಲಯಕ್ಕೆ ಮಾಹಿತಿ ನೀಡಿದರು. ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸುತ್ತಿರುವುದರಿಂದ ಪ್ರದೂಷ್ ಮಾಫಿ ಸಾಕ್ಷಿ ಹೇಳಿಕೆ ಮುಂದೂಡಲು ಮನವಿ ಮಾಡಿದ್ದು, ಮನವಿಯನ್ನು ನ್ಯಾಯಾಲಯ ತಳ್ಳಿಹಾಕಿದೆ. ಇದಕ್ಕೆ ನ್ಯಾಯಾಲಯ, ಸುಪ್ರೀಂ ಕೋರ್ಟ್ ಟ್ರಯಲ್‌ಗೆ ಟೈಂ ಬಾಂಡ್ ಹಾಕಿದೆ. ಹೀಗಾಗಿ ದಿನಾಂಕ ಮುಂದೂಡಲು ಸಾಧ್ಯವಿಲ್ಲ ಎಂದು ದರ್ಶನ್ ಪರ ವಕೀಲರಿಗೆ ತಿಳಿಸಿದೆ.

ಸಂಸ್ಕಾರಯುತ ಶಿಕ್ಷಣಕ್ಕೆ ವಾಸವಿ

ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅಭಿಮತ

ಕೊಳ್ಳೇಗಾಲ: ತಾಲೂಕಿನ ಹೊಸ ಹಂಪಾಪುರ ಗ್ರಾಮದ ಬಳಿ ಆರ್ಯ ವೈಶ್ಯ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ವಾಸವಿ ವಿದ್ಯಾಸಂಸ್ಥೆಯ ಭೂಮಿ ಪೂಜಾ ಕಾರ್ಯಕ್ರಮವನ್ನು ಬೆಂಗಳೂರಿನ ಶ್ರೀ ವಾಸವಿ ವಿಶ್ವಪೀಠ ಆರ್ಯವೈಶ್ಯ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ನೆರವೇರಿಸಿದರು.

ನಂತರ ಮಾತನಾಡಿದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಶಿಕ್ಷಣವನ್ನು ಹಲವು ಸಂಸ್ಥೆಗಳು ನೀಡುತ್ತವೆ. ಆದರೆ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಬೆಳೆಸುವ ಶಿಕ್ಷಣ ನೀಡುವುದು ವಾಸವಿ ವಿದ್ಯಾಸಂಸ್ಥೆಯ ವಿಶೇಷತೆ ಎಂದರು. ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣದ ಜತೆಗೆ ನೈತಿಕ ಮೌಲ್ಯಗಳು, ಸಂಸ್ಕಾರ ಮತ್ತು ಸಮಾಜದ ಬಗ್ಗೆ ಜವಾಬ್ದಾರಿ ಬೆಳೆಸುವ ಕಾರ್ಯಕ್ಕೆ ಸಂಸ್ಥೆ ಮುಂದಾಗಲಿದೆ. ಈ ವಿದ್ಯಾಸಂಸ್ಥೆಯ ಅಭಿವೃದ್ಧಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಆರ್ಯವೈಶ್ಯ ಸಂಘ ಮಹಾಸಭಾ ಅಧ್ಯಕ್ಷ ಆರ್.ಪಿ. ರವಿಶಂಕರ್ ಮಾತನಾಡಿ, ಆರ್ಯವೈಶ್ಯ ಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ವಿದ್ಯಾಸಂಸ್ಥೆಯನ್ನು ಅಭಿವೃದ್ಧಿಪಡಿಸುವ ಕಾರ್ಯ ಕೈಗೊಳ್ಳಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಥೆ ಉತ್ತಮವಾಗಿ ಬೆಳೆಯಲು ಸಮುದಾಯದ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು.

ಮಾಜಿ ಸಚಿವ ಎನ್. ಮಹೇಶ್ ಮಾತನಾಡಿ, ಶಿಕ್ಷಣವು ವ್ಯಕ್ತಿಯ ಜೀವನದಲ್ಲಿ ಮಹತ್ವದ ಬದಲಾವಣೆ ತರುವ ಶಕ್ತಿಯನ್ನು ಹೊಂದಿದೆ. ಮಕ್ಕಳಿಗೆ ಉತ್ತಮ ಶಿಕ್ಷಣದ ಜತೆಗೆ ಸಂಸ್ಕಾರ ನೀಡುವಂತಹ ಸಂಸ್ಥೆಗಳ ಅಗತ್ಯವಿದೆ. ಈ ನಿಟ್ಟಿನಲ್ಲಿ ವಾಸವಿ ವಿದ್ಯಾಸಂಸ್ಥೆಯ ಪ್ರಯತ್ನ ಶ್ಲಾಘನೀಯವಾಗಿದ್ದು, ಸಂಸ್ಥೆಯ ಬೆಳವಣಿಗೆಗೆ ಅಗತ್ಯ ಸಹಕಾರ ದೊರೆಯಲಿ ಎಂದು ಆಶಿಸಿದರು.

ಮಾಜಿ ಶಾಸಕ ಎಸ್. ಬಾಲರಾಜು ಮಾತನಾಡಿ, ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪನೆಯಾಗುತ್ತಿರುವುದು ಸ್ಥಳೀಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಸಂಸ್ಥೆ ಪ್ರಮುಖ ಪಾತ್ರ ವಹಿಸಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಆರ್. ನರೇಂದ್ರ, ಬೆಂಗಳೂರು ಶ್ರೀ ಭಾಗ್ಯಲಕ್ಷ್ಮೀ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಬಿ.ಎ. ಶ್ರೀನಿವಾಸ ಗುಪ್ತ, ಬೆಂಗಳೂರಿನ ಕ್ಲೌಡ್‌ನೈನ್ ಹಾಸ್ಪಿಟಲ್ ಗ್ರೂಪ್ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಬಿ. ಆರ್. ಕಿಶೋರ್, ಬೆಂಗಳೂರಿನ ಶ್ರೀ ಗ್ಲೋಕೊ ಬಯೋಟೆಕ್ ಪ್ರೈವೇಟ್ ಲಿಮಿಟೆಡ್ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀನಾಥ್, ವಾಸವಿ ವಿದ್ಯಾಸಂಸ್ಥೆ ಅಧ್ಯಕ್ಷ ಎ.ಡಿ. ಕುಮಾರಕೃಷ್ಣ, ಕಾರ್ಯದರ್ಶಿ ಪಿ.ಜಿ. ಶ್ರೀಧರ್, ಐಎನ್‌ಜಿ ವೈಶ್ಯ ಬ್ಯಾಂಕ್ ನಿವೃತ್ತ ವಿಭಾಗೀಯ ವ್ಯವಸ್ಥಾಪಕ ನರಸಿಂಹಮೂರ್ತಿ ಮುಖ್ಯೋಪಾಧ್ಯಾಯನಿ ಗೀತಾ ಪ್ರಾಂಶುಪಾಲರಾದ ವಾಸವಂಬ ನಾಗೇಂದ್ರ ಎಂ ನಾಗೇಂದ್ರ ಸೇರಿದಂತೆ ಆರ್ಯವೈಶ್ಯ ಸಂಘದ ಪದಾಧಿಕಾರಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಜಾತಿ ನಿಂದನೆ ತಡೆಯದಿದ್ದರೆ ಹೋರಾಟ

ಮೈಸೂರು: ರಾಜ್ಯದಾದ್ಯಂತ ಮಾದಿಗ ಮತ್ತು ಇತರ ದಲಿತ ಸಮುದಾಯದ ಮೇಲೆ ಸರಣಿ ಜಾತಿ ದೌರ್ಜನ್ಯಗಳು ಗೃಹ ಇಲಾಖೆ ವೈಫಲ್ಯದ ಕಾರಣ ನಡೆಯುತ್ತಿವೆ. ಹೀಗಾಗಿ ಇವುಗಳ ತಡೆಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತುರ್ತು ಕ್ರಮ ಕೈಗೊಳ್ಳದಿದ್ದರೆ ಅವರ ನಿವಾಸಕ್ಕೆ ಮಾದಿಗ, ಸಮಗಾರ, ಡೋಹರ, ದಕ್ಕಲಿಗ ಮತ್ತು ಮೋಚಿಗಾರ ಸಂಘಟನೆಗಳ ಒಕ್ಕೂಟ ಹಾಗೂ ದಲಿತರ ಸಮುದಾಯ ಮುತ್ತಿಗೆ ಹಾಕಿ ಪ್ರತಿಭಟಿಸಬೇಕಾಗುತ್ತದೆ ಎಂದು ಹಿರಿಯ ವಕೀಲ ಅರುಣ್ ಕುಮಾರ್ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಳೆದ 2 ತಿಂಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾದಿಗ ಸಮುದಾಯ ಸೇರಿದಂತೆ ಇತರ ದಲಿತ ಸಮುದಾಯಗಳವರ ಜಾತಿ ಕಾರಣಕ್ಕಾಗಿನಜ ಕೊಲೆ ಮತ್ತು ಅತ್ಯಾಚಾರದ ಕೊಲೆಯ 10 ಗಂಭೀರ ಪ್ರಕರಣ ವರದಿಯಾಗಿವೆ. ಇವು ರಾಜ್ಯ ಗೃಹ ಇಲಾಖೆಯ ಸಂಪೂರ್ಣ ವೈಫಲ್ಯ ಬಿಂಬಿಸುತ್ತಿದ್ದು, ರಾಯ್ಯದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳಿಗೆ ಕಾನೂನ ಸುವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ರಕ್ಷಣೆ ನಿಜಕ್ಕೂ ಜಾರಿಯಲ್ಲಿದೆಯೇ ಎಂಬ ಗಂಭೀರ ಪ್ರಶ್ನೆ ಏಳುವಂತಾಗಿದೆ. ಈ ಹಿನ್ನೆಲೆಯಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟ ಈ ಎಲ್ಲಾ ಘಟನೆಗಳನ್ನು ತೀವ್ರವಾಗಿ ಖಂಡಿಸುತ್ತದೆ ಎಂದರು.

ರಾಯಚೂರು, ಹಾಸನ, ಮೈಸೂರು, ಯಾದಗಿರಿ ಮೊದಲಾದ ಕಡೆಗಳಲ್ಲಿ ಕ್ಷುಲ್ಲಕ ಕಾರಣಕ್ಕೆ ದಲಿತ ವ್ಯಕ್ತಿಗಳ ಹಲ್ಲೆ, ಲೈಂಗಿಕ ದೌರ್ಜನ್ಯವೆಸಗಿ ಹಲ್ಲೆ ಮೊದಲಾದವು ಹೆಚ್ಚಿನ ಪ್ರಮಾಣದಲ್ಲಿ ನಡೆದ ವರದಿಗಳು ಬಂದಿವೆಯಾದರೂ ಗೃಹ ಇಲಾಖೆ ಇವನ್ನು ತಡೆಯುವಲ್ಲಿ, ದಲಿತರಿಗೆ ರಕ್ಷಣೆ ನೀಡುವ ನಿಟ್ಟಿನಲ್ಲಿ ವಿಫಲವಾಗಿದೆ. ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸ್ವತಃ ಪರಿಶಿಷ್ಟ ಜಾತಿ ಸಮುದಾಯದಿಂದ ಬಂದವರಾಗಿದ್ದರೂ ಒಮ್ಮೆಯೂ ಸಂತ್ರಸ್ತರ ಮನೆಗೆ ಭೇಟಿ ನೀಡಿ ಧೈರ್ಯ ತುಂಬಿಲ್ಲ. ಸಮುದಾಯಕ್ಕೆ ರಕ್ಷಣೆ ಒದಗಿಸುವ ಕ್ರಮ ಕೈಗೊಂಡಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಶೀಘ್ರ ಕಾರ್ಯಪ್ರವೃತ್ತರಾಗದಿದ್ದರೆ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟಿಸಬೇಕಾಗುತ್ತದೆಂದು ಎಚ್ಚರಿಸಿದರು.

ಇದೇ ವೇಳೆ, ಟಿ. ನರಸೀಪುರ ಘಟನೆ ಕುರಿತಂತೆ ಮಾತನಾಡಿ ಇನ್‌ಸ್ಪೆಕ್ಟರ್ ಧನಂಜಯ ವಿರುದ್ಧ ಎಫ್‌ಐಆರ್ ದಾಖಲಿಸಬೇಕಾಗಿತ್ತೇ ಹೊರತು ಮಾಜಿ ಸಂಸದ ಪ್ರತಾಪ್‌ಸಿಂಹ ವಿರುದ್ಧವಲ್ಲ, ಪ್ರತಾಪ್‌ಸಿಂಹ ತಪ್ಪೇನನ್ನೂ ಹೇಳಿಲ್ಲ, ಅವರ ಹೇಳಿಕೆಯನ್ನು ಸರಿಯಾಗಿ ಅರ್ಥೈಸಿಕೊಳ್ಳದೇ ಅಟ್ರಾಸಿಟಿ ಕೇಸ್ ದಾಖಲಿಸಿರುವುದು ಸರಿಯಲ್ಲ. ಇದರಿಂದಾಗಿ ನೈಜ ಅಟ್ರಾಸಿಟಿ ಕೇಸ್‌ಗಳ ಬಗ್ಗೆಯೂ ಜನತೆ ಸಂಶಯ ಪಟ್ಟು, ಗೌರವ ಕಳೆದುಕೊಳ್ಳುವಂತಾಗುತ್ತದೆ ಎಂದು ಬೇಸರಿಸಿದರು. ನರಸಿಂಹಮೂರ್ತಿ, ಮಧುರಾಜ್, ಸಿದ್ದರಾಜು, ಶಿವಣ್ಣ, ರಾಜಣ್ಣ ಇದ್ದರು.



ಮೊದಲ ಪುಟದಿಂದ

ರಾಜೀನಾಮ

ಡೇರಿಗೆ ಗುಣಮಟ್ಟದ ಹಾಲು ಸರಬರಾಜು ಮಾಡಿ

ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ

ಹೆಗ್ಗೋಠಾರ ಎಂಪಿಸಿಎಸ್ ; ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆ.

ಚಾಮರಾಜನಗರ, ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಸೋಮವಾರ ಹಾಲುಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ಉದ್ಘಾಟಿಸಿ ಮಾತನಾಡಿ, ಡೇರಿಗೆ ಗುಣಮಟ್ಟದ ಹಾಲು ಸರಬರಾಜು ಮಾಡಿದರೆ ಉತ್ಪಾದಕರಿಗೆ ಉತ್ತಮದರ ಸಿಗುವ ಜೊತೆಗೆ ಒಕ್ಕೂಟಗಳು ಹಾಗೂ ಸಂಘಗಳು ಅಭಿವೃದ್ಧಿಯತ್ತ ಸಾಗಲಿವೆ ಡೇರಿಗಳು ಸುಭದ್ರವಾಗಿದ್ದರೆ, ಒಕ್ಕೂಟವು ಸಹ ಅಭಿವೃದ್ಧಿಪಥದಲ್ಲಿ ಮುನ್ನಡೆಯಲಿದೆ. ಹೀಗಾಗಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ ಹಾಲುಉತ್ಪಾದಕರ ಸಂಘದ ಸದಸ್ಯರಿಗೆ ಒಕ್ಕೂಟದಿಂದ ಹಲವು ಸೌಲಭ್ಯಗಳಿದ್ದು, ಅವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು ಮಾತನಾಡಿ ಈ ಭಾಗದಲ್ಲಿ ಹೈನುಗಾರಿಕೆ ಪ್ರಧಾನ ಕಸುಬಾಗಿದ್ದು, ಇದರಿಂದ ತಮ್ಮ ಜೀವನ ನಿರ್ವಹಣೆ ಸಾಧ್ಯವಾಗುತ್ತಿದೆ. ತಾವು ಒಕ್ಕೂಟಕ್ಕೆ ಗುಣಮಟ್ಟದ ಹಾಲು ಸರಬರಾಜು ಮಾಡುವ ಮೂಲಕ ಸಂಘಗಳ ಉಳಿವಿಗೆ ಮುಂದಾಗಬೇಕು ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡೇರಿ ಅಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ, ಸಂಘ ಉತ್ತಮ ವಹಿವಾಟು ನಡೆಸಿದ ಪರಿಣಾಮ ಈ ವರ್ಷ 13.32 ಲಕ್ಷ ರೂ. ನಿವ್ವಳಲಾಭ ಗಳಿಸಿದೆ. 2019ರಿಂದ 26ರವರೆಗೆ 8 ವರ್ಷಗಳ ಅವಧಿಯ ಬೋನಸ್ ಹಣವನ್ನು ಮುಂದಿನ ದಿನಗಳಲ್ಲಿ ವಿತರಿಸಲಾಗುವುದು ಎಂದರು.

ಚಾಮುಲ್ ವಿಸ್ತರಣಾಧಿಕಾರಿ ಶಾಂಸುಂದರ್ ಸಂಘದ 2017–18. 24–25 ನೇ ಸಾಲಿನ ಆಡಿಟ್ ವರದಿ ಮಂಡಿಸಿದರು. ಉಪಾಧ್ಯಕ್ಷ ಪಾಪನಾಯಕ, ನಿರ್ದೇಶಕರಾದ ಗುರುಮಲ್ಲಪ್ಪ, ಮಲ್ಲೇಶ, ಎಚ್.ಬಿ.ಮಹೇಶ್, ಎಂ.ಮಹೇಶ್, ರಮೇಶ, ಪರಶಿವಮೂರ್ತಿ, ಪುಟ್ಟಮಲ್ಲಪ್ಪ, ಮಹದೇವಯ್ಯ ಸುಬ್ಬಮ್ಮ ಚಾಮುಲ್ ಉಪವ್ಯವಸ್ಥಾಪಕ ಎನ್.ಅಮರ್. ಸಮಾಲೋಚಕ ಹೇಮಂತಕುಮಾರ್, ಸಿಇಒ ಮಹೇಶ್, ಹಾಲು ಪರೀಕ್ಷಕ ಮಹದೇವಸ್ವಾಮಿ, ಸಹಾಯಕ ಮಾಯಪ್ಪ ಗ್ರಾಮದ ಹಾಲು ಉತ್ಪಾದಕ ಸಹಕಾರಸಂಘದ ಸದಸ್ಯರು ಹಾಜರಿದ್ದರು.

1,ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಹಾಲುಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ 2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ಉದ್ಘಾಟಿಸಿದರು.

ನಾಳೆ ಅಂಬೇಡ್ಕರ್ ವಿವಿದೋದ್ದೇಶ ಸಂಘದ ವಾರ್ಷಿಕ ಸಭೆ

ಮೈಸೂರು,ಸೆ.–ಮೈಸೂರಿನ ಕಲಾಮಂದಿರದಲ್ಲಿ ಸೆ.25ರಂದು ಬೆಳಗ್ಗೆ 10 ಗಂಟೆಗೆ ಅಂಬೇಡ್ಕರ್ ವಿವಿದೋದ್ದೇಶ ಸಹಕಾರ ಸಂಘದ ವಾರ್ಷಿಕ ಮಹಾ ಸಭೆ ಹಾಗೂ ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ತುಂಬಲ ರಾಮಣ್ಣ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದಲ್ಲಿ ನಳಂದಾ ಬುದ್ಧ ವಿಹಾರದ ಬೋಧಿ ರತ್ನ ಭಂತೇಜಿ, ಉರಿಲಿಂಗಪೆದ್ದಿ ಮಠ ಜ್ಞಾನ ಪ್ರಕಾಶ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮವನ್ನು ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸಂಸ್ಥೆಯ ಸಾಫ್ಟ್‌ವೇರ್ ಅನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಿಡುಗಡೆಗೊಳಿಸಲಿದ್ದಾರೆ ಎಂದರು.

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೀಮ್ ಟುಡೇ ಡಿಜಿಟಲ್ ಚಾನಲ್ ಲೋಗೋ ಬಿಡುಗಡೆ ಮಾಡಲಿದ್ದಾರೆ. ಬುದ್ಧ ಹಾಗೂ ಬಾಬಾ ಸಾಹೇಬರ ಭಾವಚಿತ್ರಕ್ಕೆ ಕೃಷಿ ಸಚಿವ ನರೇಂದ್ರ ಸ್ವಾಮಿ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಪುಷ್ಪಾರ್ಚನೆ ಮಾಡುವರು. ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಭೀಮ್ ಟುಡೇ ಡಿಜಿಟಲ್ ಚಾನಲ್ ಅನಾವರಣಗೊಳಿಸಲಿದ್ದಾರೆ. ಈ ವೇಳೆ ನಿವೃತ್ತ ಅಧಿಕಾರಿ ಸಿದ್ದಯ್ಯ ಯಶಸ್ವಿನಿ ಕಾರ್ಡ್ ವಿತರಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್, ಅಂಬೇಡ್ಕರ್ ನಿಗಮದ ಅಧ್ಯಕ್ಷ ನರೇಂದ್ರ, ಮಾಜಿ ಮೇಯರ್ ಪುರುಷೋತ್ತಮ್ ಸೇರಿ ಮತ್ತಿತರರು ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಂಗವಾದಿ ನಾರಾಯಣಪ್ಪ, ಗಣೇಶ್, ಡಿ.ಗೋವಿಂದರಾಜು ಗೋಷ್ಠಿಯಲ್ಲಿದ್ದರು.

ಸರ್ಕಾರಿ ಪೀಠೋಪಕರಣ ಕೊಡುಗೆ ನೀಡಿದ ಕಂಪನಿ

ಎಚ್.ಡಿ.ಕೋಟೆ: ಬೀಚನಹಳ್ಳಿ ಸುಭಾಷ್ ಪವರ್ ಕಾರ್ಪೊರೇಷನ್ ಕಂಪನಿ, ಹೊಸತೊರವಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಅನುಕೂಲಕ್ಕಾಗಿ 1 ಲಕ್ಷ ರೂ.ವೆಚ್ಚದ ಪೀಠೋಪಕರಣಗಳನ್ನು ಕೊಡುಗೆ ನೀಡಿತು.

ಪೀಠೋಪಕರಣಗಳನ್ನು ಶಾಲೆಗೆ ಹಸ್ತಾಂತರಿಸಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು ಮಾತನಾಡಿ, ಈ ಶಾಲೆಗೆ ನಾನು ನಾಲ್ಕು ಬಾರಿ ಭೇಟಿ ಕೊಟ್ಟಿದ್ದೇನೆ. ಇಲ್ಲಿನ ಮಕ್ಕಳಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಉತ್ತಮವಾದ ಕಲಿಕೆ ಹಾಗೂ ಬೆಳವಣಿಗೆ ಗಮನಿಸಿದ್ದೇನೆ. ಶಾಲೆಗೆ ಅಗತ್ಯ ವಸ್ತುಗಳ ಕೊರತೆ ಇತ್ತು. ವಿದ್ಯಾರ್ಥಿಗಳಿಗೆ ತುರ್ತಾಗಿ ಬೇಕಾಗಿದ್ದ ಬೆಂಚುಗಳ ಅನಿವಾರ್ಯತೆಯನ್ನು ಗಮನಿಸಿದ ಜೀವಕ ಸಂಘಟನೆಯ ಉಮೇಶ್ ಅವರು, ಸೆಂದಿಲ್ ಕುಮಾರ್ ಅವರ ಮೂಲಕ ಈ ಶಾಲೆಗೆ ಸುಮಾರು 1 ಲಕ್ಷ ರೂ. ಮೌಲ್ಯದ ಬೆಂಚುಗಳನ್ನು ಕೊಡಿಸಿರುವುದು ಶ್ಲಾಘನೀಯ ಎಂದರು.

ಶಾಲೆಯನ್ನು ಮತ್ತಷ್ಟು ಉನ್ನತೀಕರಿಸಲು ಕೊಠಡಿಗಳ ಅವಶ್ಯಕತೆಯಿದೆ. ಮುಂದಿನ ಅನುದಾನದಲ್ಲಿ ಮೊದಲ ಆದ್ಯತೆ ಮೇರೆಗೆ ಕೊಠಡಿಗಳನ್ನು ಮಂಜೂರು ಮಾಡುವ ವ್ಯವಸ್ಥೆ ಮಾಡಲಿದ್ದೇನೆ.

ಶಾಲೆಗ ಉದಾರವಾಗಿ ದಾನ ಮಾಡಿದ ಸೆಂದಿಲ್ ಮತ್ತು ತಂಡದವರಿಗೆ ಧನ್ಯವಾದ ತಿಳಿಸಿದರು.

ಸುಭಾಷ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ನ ಸೀನಿಯರ್ ಮ್ಯಾನೇಜರ್ ಸೆಂದಿಲ್ ಕುಮಾರ್ ಮಾತನಾಡಿ, ಯಾವುದೇ ದೇಶದ ಅಭಿವೃದ್ಧಿ ಹೊಂದಲು ಶಿಕ್ಷಣ ಅತಿ ಮುಖ್ಯ. ಅದ್ದರಿಂದ, ಪ್ರಾಥಮಿಕ ಹಂತದಲ್ಲಿ ಸರಿಯಾಗಿ ಗುಣಮಟ್ಟದ ಶಿಕ್ಷಣ ಸಿಕ್ಕಾಗ ಮಾತ್ರ ಮುಂದೆ ಸಾಧನೆ ಮಾಡಲು ಸಾಧ್ಯವಿದೆ ಎಂಬುದನ್ನು ನಾವು ಮನಗಾಣಬೇಕು. ಅದಕ್ಕಾಗಿ ಶಾಲೆಗೆ ಹಾಗೂ ಮಕ್ಕಳಿಗೆ ಬೇಕಾದ ಸೌಕರ್ಯಗಳನ್ನ ಒದಗಿಸಿ ಕೊಡಬೇಕು. ನಾವು ಬಾಲ್ಯದಲ್ಲಿ ಓದುವಾಗ ಕುಳಿತು ಕೊಳ್ಳಲು ಮಣೆ ಡೆಸ್ಕು, ಬರೆಯಲು ಪುಸ್ತಕ, ಪೆನ್ನು, ಸರಿಯಾದ ಬಟ್ಟೆಗಳು ಇರಲಿಲ್ಲ. ಇರುವ ವ್ಯವಸ್ಥೆಯನ್ನೆ ಸರಿಯಾಗಿ ಉಪಯೋಗಿಸಿಕೊಂಡು ಕಠಿಣ ಪರಿಶ್ರಮದಿಂದ ಓದಿ ಜೀವನದಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಂಡಿದ್ದೇವೆ ಎಂದರು.

ಪ್ರಸ್ತುತವಾಗಿ ಜಾಗತಿಕ ಉನ್ನತ ಮಟ್ಟದಲ್ಲಿ ಸಿಗುವ ಸವಲತ್ತುಗಳನ್ನು ಬಳಸಿಕೊಂಡು ಉತ್ತಮ ಪ್ರಜೆಗಳಾಗಿ ಅತ್ಯುನ್ನತ ಸ್ಥಾನವನ್ನು ದಕ್ಕಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಜೀವಿಕ ಸಂಘಟನೆ ಸಂಚಾಲಕ ಉಮೇಶ್ ಬಿ ನೂರಲಕುಪ್ಪೆ ಮಾತನಾಡಿ, ಪಟ್ಟಣಕ್ಕೆ ಹೊಂದಿಕೊಂಡಿರುವ ಹೊಸ ತೊರವಳ್ಳಿ ಸರ್ಕಾರಿ ಶಾಲೆ ಪಟ್ಟಣದಿಂದ ಕೂಗಳತೆ ದೂರದಲ್ಲಿದ್ದು, ಖಾಸಗಿ ಶಾಲೆಗಳ ಪ್ರಚಾರಕ್ಕೆ ಮಾರುಹೋಗಿರುವ ಇಂದಿನ ಕಾಲದಲ್ಲಿ ಇಲ್ಲಿನ ಶಿಕ್ಷಕರು ಅತ್ಯಂತ ಶ್ರದ್ಧೆಯಿಂದ ಮಕ್ಕಳ ಕಲಿಕೆಯನ್ನು ಹೆಚ್ಚಿಸಿ ಬಾಲ್ಯದಿಂದಲೇ ಪಾಠ ಪ್ರವಚನದ ಆಸಕ್ತಿ ಬೆಳೆಸಿ ಗುಣಾತ್ಮಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಯಾವುದೇ ನಗರ ಪ್ರದೇಶದ ಶಾಲೆಗೂ ಕಮ್ಮಿ ಇಲ್ಲದಂತೆ ಕಲಿಕೆಯಲ್ಲಿ ಇಲ್ಲಿನ ಮಕ್ಕಳು ಮುಂದೆ ಇದ್ದಾರೆ ಎಂದು ತಿಳಿಸಿದರು.

ಸುಭಾಷ್ ಪವರ್ ಕಾರ್ಪೊರೇಷನ್ ವ್ಯವಸ್ಥಾಪಕ ಸೆಂದಿಲ್ ಕುಮಾರ್, ಮ್ಯಾನೇಜರ್ ನಿರಂಜನ್, ಸೀನಿಯರ್ ಇಂಜಿನಿಯರ್ ಶಿವಕುಮಾರ್, ಎ. ಎಸ್ ಮಹದೇವಯ್ಯ, ನಂಜುಂಡಯ್ಯ, ಕೆಂಪರಾಜು, ಶಾಲಾ ಸಮಿತಿ ಅಧ್ಯಕ್ಷ ರಾಜನಾಯ್ಕ, ಸ್ಟುಡಿಯೋ ಸ್ವಾಮಿ ನಾಯ್ಕ, ಬೀರಪ್ಪಗೌಡ, ಶಿವರಾಜ್, ಸಂಜೀವ್, ಮುಖ್ಯ ಶಿಕ್ಷಕ ಶಿವಲಿಂಗನಾಯ್ಕ, ಸಹ ಶಿಕ್ಷಕಿ ಶ್ವೇತಾ, ಅಂಗನವಾಡಿ ಕಾರ್ಯಕರ್ತೆ ಜ್ಯೋತಿ, ಆಶಾ ಕಾರ್ಯಕರ್ತೆ ದೊಡ್ಡಮ್ಮ, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮದ ಯಜಮಾನರು ಇದ್ದರು.

4ನೇ ಹಂತದ ಕೆರೆಗಳಿಗೆ ನೀರು ತುಂಬಿಸಿ

ಗೇಟ್ವಾಲ್ ಅಳವಡಿಕೆ ಹಾಗೂ ತೆರವಿಗೆ ಆಗ್ರಹ । ಜಿಲ್ಲಾಧಿಕಾರಿಗೆ ಮನವಿ

ಚಾಮರಾಜನಗರ: ಆಲಂಬೂರು ಏತರಾವರಿ ಯೋಜನೆ 4ನೇ ಹಂತದ ಬೊಮ್ಮನಹಳ್ಳಿ ಕೆರೆ, ಯರಗನಹಳ್ಳಿ ಸುವರ್ಣನಗರ ಕೆರೆ ಹಾಗೂ ಅರಕಲವಾಡಿ ಕೆರೆಗಳಿಗೆ ನೀರು ತುಂಬಿಸಲು ಒತ್ತಾಯಿಸಿ, ಕೆರೆಯ ನೀರನ್ನು ಅವಲಂಬಿಸಿರುವ ರೈತರು ಮತ್ತು ನಾಗರಿಕರು ನಗರದ ಸ್ಥಳೀಯ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಿದರು.

ಬೊಮ್ಮನಹಳ್ಳಿ ನೀರಿನ ತೊಟ್ಟಿಯ ಬಳಿ ಎತ್ತರ ಇರುವ ಪೂರ್ವ ಭಾಗಕ್ಕೆ ಗೇಟ್ವಾಲ್ ಅಳವಡಿಸಿ, ತಗ್ಗಾದ ಪಶ್ಚಿಮ ಭಾಗದ ಕಡೆ ಯಾವುದೇ ಗೇಟ್ ಅಳವಡಿಸಿಲ್ಲ. ಆದುದರಿಂದ ಪೂರ್ವ ಭಾಗದ ಚಾಮರಾಜನಗರ ತಾಲ್ಲೂಕಿನ ಕೆರೆಗಳಾದ ಬೊಮ್ಮನಹಳ್ಳಿ ಕೆರೆ, ಯರಗನಹಳ್ಳಿ ಸುವರ್ಣನಗರ ಕೆರೆ ಮತ್ತು ಅರಕಲವಾಡಿ ಕೆರೆಗಳಿಗೆ ನೀರು ಸಮರ್ಪಕವಾಗಿ ಬರುತ್ತಿಲ್ಲ. ಈ ಅನುಸಾರವಾಗಿ ಅಳವಡಿಸಿರುವ ಗೇಟ್ವಾಲ್ ಅನ್ನು ನಿಷ್ಕ್ರಿಯಗೊಳಿಸಬೇಕು ಅಥವಾ ತಕ್ಷಣವೇ ಸೂಚಿಸಬೇಕು ಎಂದು ಅವರು ಗಮನಿಸಿದರು.

ನಿಗದಿ ಹಾಗೂ ಉಪಸ್ಥಿತರಿದ್ದ ಗಣ್ಯರು

ಈ ಯೋಜನೆಗೆ ನೀರು ಬಿಡಲು ನಿಗದಿಪಡಿಸಲಾಗಿದೆ, ಆದ್ಯತೆ ಮತ್ತು ಜೇಷ್ಠತೆಯ ಆಧಾರದಲ್ಲಿ ಕಟ್ಟುನಿಟ್ಟಾಗಿ ನೀರು ಬಿಡಲು ಸೂಚಿಸಿ, ಎಲ್ಲರಿಗೂ ನ್ಯಾಯಯುತವಾಗಿ ನೀರು ಪಡೆಯಲು ಅವಕಾಶ ಮಾಡಿಕೊಡ

ಕಡ್ಡಾಯ ಪೈಪ್ಲೈನ್ ಅಳವಡಿಕೆ, ಸಮರ್ಪಕ ನೀರು ಹಂಚಿಕೆ

ಈ ಯೋಜನೆಯಲ್ಲಿ 1 ಕೆರೆ1 ಪೈಪ್ಲೈನ್ ಅಳವಡಿಸಲು ಆದೇಶವಿದ್ದರೂ, ಪಶ್ಚಿಮ ಭಾಗದ ಗುಂಡ್ಲುಪೇಟೆ ತಾಲೂಕಿನ 8 ಕೆರೆಗಳಿಗೆ ಪೈಪ್ಲೈನ್ ಅಳವಡಿಸದೇ ನೀರಿನ ಪ್ರತಿಒತ್ತಡ ಸಿಗದೆ ಪೂರ್ವ ಭಾಗದ 3 ಕೆರೆಗಳಿಗೆ ತಾಂತ್ರಿಕವಾಗಿ ನಿಗದಿಪಡಿಸಿದ ಬಹಳ ನೀರು ಬರುತ್ತಿದೆ. ಆದುದರಿಂದ ತಾಂತ್ರಿಕ ಆದೇಶದಂತೆ ಕಡ್ಡಾಯವಾಗಿ ಪೈಪ್ಲೈನ್ ಅಳವಡಿಸಲು ಕ್ರಮವಹಿಸಬೇಕು. ಸ್ವಾಭಾವಿಕ ಕಾಲುವೆಗಳು ಕೆರೆಯಿಂದ ಕೆರೆಗೆ ಇದ್ದರೂ, ಬರಪರಿಸ್ಥಿತಿಯಲ್ಲಿ ಹಾಗೂ ಮಳೆಯ ಕೊರತೆಯಾದಾಗ ನೀರನ್ನು ಎಲ್ಲಾ ಭಾಗಕ್ಕೂ ಸಮನಾಗಿ ಹಂಚಿಕೆ ಮಾಡಲು ಈ ಯೋಜನೆ 4 ಎಲ್ಲಾ ಕೆರೆಗಳಿಗೆ ಪೈಪ್ಲೈನ್ ಅಳವಡಿಸಬೇಕು. ಇಲ್ಲದಿದ್ದಲ್ಲಿ ನೀರಿನ ಅಭಾವವಿರುವ ಸನ್ನಿವೇಶದಲ್ಲಿ ಯೋಜನೆ ಕೊನೆಯಲ್ಲಿರುವ ಕೆರೆಗಳಿಗೆ ನೀರು ತಲುಪಿಸಲು ಸಾಧ್ಯವಾಗದ ಉದ್ದೇಶಿತ ಯೋಜನೆ ವಿಫಲವಾಗಿ, ಈ ಯೋಜನೆಗೆ ಒಳಪಡುವ ಎಲ್ಲಾ ರೈತರು ಹಾಗೂ ನಾಗರಿಕರಿಗೂ ಸಮಪ್ರಮಾಣದ ನ್ಯಾಯ ಸಿಗುವುದಿಲ್ಲ. ಆದುದರಿಂದ ಎಲ್ಲಾ ಕೆರೆಗಳ ಪೈಪ್ಲೈನ್ ಅಳವಡಿಸಲು ಅವರು ಒತ್ತಾಯಿಸಿದರು.

ಪಂಪ್ ಬಳಕೆ, ತಾಂತ್ರಿಕ ಪರಿಶೀಲನೆಗೆ ಒತ್ತಾಯ

ಉತ್ತೂರು ಕೆರೆಯಿಂದ ಬೊಮ್ಮನಹಳ್ಳಿ ನೀರಿನ ತೊಟ್ಟಿಗೆ ಏಕಕಾಲದಲ್ಲಿ ಕನಿಷ್ಠ 2 ಪಂಪ್ಗಳಿಂದ ನೀರನ್ನು ಹರಿಯಬಿಡಬೇಕು. ಇಲ್ಲದಿದ್ದರೆ ತೊಟ್ಟಿಯಿಂದ 2 ಭಾಗಕ್ಕೂ ನಿಗದಿತ ಪ್ರಮಾಣದಲ್ಲಿ ನೀರು ಹರಿಯುವುದಿಲ್ಲ. ಈ ಯೋಜನೆ 3ನೇ ಹಂತದಲ್ಲಿಯೇ ಗುರುತ್ವಾಕರ್ಷಣಾ ಚಲನೆಯಲ್ಲಿಯೇ ಅಂತರದಲ್ಲಿರುವ ಕಿಲಗೆರೆ ಕೆರೆಯಿಂದಲೇ ಸುಮಾರು 83 ಜಾಗತಿಕ ವಿಸ್ತೀರ್ಣದ ದೊಡ್ಡ ಕೆರೆಯಾದ ಅರಕಲವಾಡಿ ಕೆರೆಗೆ ನೀರು ಬರುವ ಅವಕಾಶವಿದೆ. ಆದರೆ, ಈ ಯೋಜನೆ ಬಿಟ್ಟು ಸುಮಾರು 17–18 ಕಿ.ಮೀ. ಮುಖಾಂತರ 4ನೇ ಯೋಜನೆಗೆ ಸೇರಿಸಿದ್ದು, ಇದರಿಂದ ಅನಾವಶ್ಯಕ ವಿದ್ಯುತ್ ವೆಚ್ಚ ಹಾಗೂ ನೀರಿನ ನಷ್ಟ ಎರಡೂ ಆಗುತ್ತಿದೆ. ಈ ವಿಚಾರವಾಗಿ ನೀರಾವರಿ ತಾಂತ್ರಿಕ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಬೇಕು. ಪೈಪ್ಲೈನ್ ಅಳವಡಿಕೆ ಆಗಿದ್ದರೂ, ನೀರಿನ ಅಭಾವವಿಲ್ಲದೆ ಹೆಚ್ಚು ನೀರು ಲಭ್ಯವಾಗುವಂತಹ ಪರಿಸ್ಥಿತಿಯಲ್ಲಿ ಸ್ವಾಭಾವಿಕವಾದ ಹಳ್ಳಗಳು ಮುಖಾಂತರವೂ ನೀರನ್ನು ಹರಿಯಬಿಡಬಹುದು. ಆದುದರಿಂದ ಈ ವಿಚಾರವನ್ನು ಈ ಯೋಜನೆ ಭಾಗದ ಜನರಿಗೆ ಮನವರಿಕೆ ಮಾಡಬೇಕು. ಈ ನೀರನ್ನು ನ್ಯಾಯಯುತವಾಗಿ ಎಲ್ಲರಿಗೂ ಸಮನಾಗಿ ಹಂಚಿಕೆ ಮಾಡುವಂತೆ ರೈತ ಮುಖಂಡರಾದ ಅರಕಲವಾಡಿ ಗುರುಸ್ವಾಮಿ ಹಾಗೂ ಜಿ.ಪಂ. ಮಾಜಿ ಸದಸ್ಯ ಅರಕಲವಾಡಿ ಎಸ್. ಸೋಮನಾಯಕ ಅವರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ಪ್ರತಿನಿಧಿಗಳು, ಅಜಯ್, ಕೆಎಂಎಫ್ ನಿವೃತ್ತ ಅಧಿಕಾರಿ ಜವರಯ್ಯ, ವೈ.ಪಿ. ರಾಜೇಂದ್ರ, ಶಂಭಲಿಂಗಪ್ಪ, ನಾಗರಾಜು ಯಣಗುಂಬ, ರಾಜಶೇಖರಮೂರ್ತಿ ಸೇರಿದಂತೆ ಕಲಾವಿದರು. ಹಾಜರಿದ್ದರು.

ನಾಳೆ ಯುವವೇದಿಕೆ ಸಂಘಟನೆ ಉದ್ಘಾಟನೆ

ಮೈಸೂರು: ಕರ್ನಾಟಕ ಯುವ ವೇದಿಕೆ ಸಂಘಟನೆಯೂ ಅಸ್ತಿತ್ವಕ್ಕೆ ಬಂದಿದ್ದು, ಸೆ.25ರಂದು ಮಧ್ಯಾಹ್ನ 3 ಗಂಟೆಗೆ ನಂಜನಗೂಡಿನ ಪ್ರವಾಸಿ ಮಂದಿರದಲ್ಲಿ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಅಯಾಜ್ ಕನ್ನಡಿಗ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೇದಿಕೆಯೂ ಕನ್ನಡ ನಾಡು, ನುಡಿ, ಜಲ, ಭಾಷೆ ಪರವಾರವಾಗಿ ಹೋರಾಟಲಿದ್ದು, ರೈತರು, ಕಾರ್ಮಿಕರು, ನೊಂದ ಮಹಿಳೆಯರ ಪರ ಕೆಲಸ ಮಾಡಲು ವೇದಿಕೆ ಅಸ್ತಿತ್ವಕ್ಕೆ ಬಂದಿದೆ. ನಮ್ಮಲ್ಲಿ ಜಾತಿ, ಧರ್ಮ, ರಾಜಕೀಯವಿಲ್ಲ. ಬುದ್ಧ, ಬಸವ ಅಂಬೇಡ್ಕರ್ ಅವರ ತತ್ವ ಸಿದ್ಧಾಂತವನ್ನು ಅಳವಡಿಸಿಕೊಂಡಿದೆ ಎಂದರು.

ಅಂದಿನ ಕಾರ್ಯಕ್ರಮಕ್ಕೆ ಶಾಸಕ ದರ್ಶನ್ ಧ್ರುವನಾರಾಯಣ್ ಭಾಗವಹಿಸಲಿದ್ದಾರೆ. ಈ ವೇಳೆ ಕನ್ನಡ ದೀಕ್ಷೆ ಎಂಬ ಕಾರ್ಯಕ್ರಮದಡಿ ನೂರಾರು ಕಾರ್ಯಕರ್ತರು ವೇದಿಕೆ ಸೇರ್ಪಡೆಯಾಗಲಿದ್ದಾರೆ. ತಾಲೂಕು, ಜಿಲ್ಲಾಧ್ಯಕ್ಷ ಹಾಗೂ ರಾಜ್ಯದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೂರ್ತಿ ಶಾಸ್ತ್ರ

ಚುನಾವಣಾ ಆಯುಕ್ತರ ಬಂಧಿಸಿ

ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ವಾಗ್ದಾಳಿ

ಮೈಸೂರು: ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಒಬ್ಬ ರಾಷ್ಟ್ರದ್ರೋಹಿ, ಕಳ್ಳ ಹಾಗೂ ಬಿಜೆಪಿ ಏಜೆಂಟ್ ಆಗಿದ್ದು, ಈತನನ್ನು ಕೂಡಲೇ ಬಂಧಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ತೀವ್ರ ವಾಗ್ದಾಳಿ ನಡೆಸಿ ಒತ್ತಾಯಿಸಿದರು. ನಗರದ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ, ಅವರ ಆತ್ಮಕ್ಕೆ ಶಾಂತಿ ಕೋರುವ ರೀತಿಯಲ್ಲಿ ವಿನೂತನವಾಗಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ಜ್ಞಾನೇಶ್ ಕುಮಾರ್ ಅವರು ಸಾಂವಿಧಾನಿಕವಾಗಿ ಕೆಲಸ ಮಾಡದೆ ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರು ಹೇಳಿದಂತೆ ಕೆಲಸ ಮಾಡುತ್ತಿದ್ದಾರೆ. ಎಸ್‌ಐಆರ್ (ಖಖಖ) ಹೆಸರಿನಲ್ಲಿ ದೇಶದ 13 ಕೋಟಿ ಜನರನ್ನು ಮತದಾನದಿಂದ ಹೊರಗಿಟ್ಟಿದ್ದಾರೆ. ಅದೇ ರೀತಿ ರಾಜ್ಯದಲ್ಲಿ ಎಎಸ್ಡಿಡಿಒ (ಂಖಖಆಆಔ) ಹೆಸರಿನಲ್ಲಿ 1.08 ಲಕ್ಷ ಮತದಾರರನ್ನು ಇಟ್ಟು, 46 ಲಕ್ಷ ಮತದಾರರನ್ನು ಲಾಜಿಕಲ್ ಡಿಸ್ಕ್ರೆಪೆನ್ಸಿಯಲ್ಲಿ (ಐಠಝಡಿಚಿಟಿ ಆಛಿಛಿಡಿಜಠಿಚಿಟಿಛಿಛಿಟಿಛಿಛಿಛಿಛಿಛಿಟಿಛಿಛಿಛಿಛಿಛಿಟಿಛಿಛಿಛ

ಶ್ರೀರಂಗಪಟ್ಟಣ ದಸರಾ ವೈಭವಕ್ಕೆ ಸಜ್ಜು: ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ

ನಗರ ಸೌಂದರ್ಯೀಕರಣ, ವಿದ್ಯುತ್ ಅಲಂಕಾರ, ಕಾವೇರಿ ಆರತಿಗೆ ಅಗತ್ಯ ಸಿದ್ಧತೆ: ಎ.ಬಿ. ರಮೇಶ್ ಬಂಡಿಸಿದ್ದೇಗೌಡ

ಮಂಡ್ಯ: ಶ್ರೀರಂಗಪಟ್ಟಣ ದಸರಾ ಆಚರಣೆಯನ್ನು ಅರ್ಥಪೂರ್ಣವಾಗಿ ಹಾಗೂ ವೈಭವದಿಂದ ನಡೆಸಲು ಅಗತ್ಯವಿರುವ ಎಲ್ಲಾ ಪೂರ್ವಸಿದ್ಧತೆಗಳನ್ನು ಕೈಗೊಳ್ಳಬೇಕು. ದಸರಾ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ಕಲ್ಪಿಸುವುದರ ಜೊತೆಗೆ ನಗರದ ಸೌಂದರ್ಯೀಕರಣಕ್ಕೆ ಆದ್ಯತೆ ನೀಡಬೇಕು ಎಂದು ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶ್ರೀರಂಗಪಟ್ಟಣದ ಟಿ.ಎ.ಪಿ.ಸಿ.ಎಂ.ಎಸ್. ಕಲ್ಯಾಣ ಮಂಟಪದಲ್ಲಿ ಕನ್ನಡಪರ ಸಂಘಟನೆಗಳು, ಪ್ರಗತಿಪರರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ದಸರಾ ಪೂರ್ವಸಿದ್ಧತೆ ಕುರಿತು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸ್ಥಳೀಯ ಕಲಾವಿದರಿಗೆ ಆದ್ಯತೆ: ದಸರಾ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ಕಲ್ಪಿಸಬೇಕು. ಪ್ರತಿವರ್ಷ ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ ದೊರೆಯುವಂತೆ ಕಾರ್ಯಕ್ರಮ ರೂಪಿಸಬೇಕು. ಈ ಬಾರಿ ಎರಡು ದಿನಗಳ ಕಾಲ ಯುವ ಸಂಭ್ರಮ ಆಯೋಜಿಸಲಾಗುತ್ತಿದ್ದು, ಖ್ಯಾತ ನಟ ಕ್ರೇಜಿಸ್ಟಾರ್ ರವಿಚಂದ್ರನ್ ಅವರಿಂದ ಉದ್ಘಾಟಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಸಂಜೆ 6 ಗಂಟೆಯ ನಂತರ ನಡೆಯುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರು ಸೇರಿದಂತೆ ಎಲ್ಲರಿಗೂ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಕವಿಗೋಷ್ಠಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗುವುದು ಎಂದರು.

ನಗರ ಸೌಂದರ್ಯೀಕರಣಕ್ಕೆ ಒತ್ತು: ದಸರಾ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ನಗರದಲ್ಲಿ ಹೆಚ್ಚಿನ ವಿದ್ಯುತ್ ಅಲಂಕಾರ ಕೈಗೊಳ್ಳಬೇಕು. ಮುಜರಾಯಿ ದೇವಾಲಯಗಳು, ಗಂಜಾಂ ಸೇರಿದಂತೆ ಪ್ರಮುಖ ಐತಿಹಾಸಿಕ ಹಾಗೂ ಪ್ರವಾಸಿ ಸ್ಥಳಗಳಲ್ಲಿಯೂ ವಿದ್ಯುತ್ ಅಲಂಕಾರಕ್ಕೆ ಆದ್ಯತೆ ನೀಡಬೇಕು. ನಗರದ ಪ್ರಮುಖ ಪ್ರವೇಶದ್ವಾರಗಳಲ್ಲಿ ಸ್ವಾಗತ ಕಮಾನುಗಳನ್ನು ಅಳವಡಿಸುವುದರ ಜೊತೆಗೆ ಹಳೆಯ ಸ್ವಾಗತ ಫಲಕಗಳನ್ನು ದುರಸ್ತಿ ಮಾಡಬೇಕು ಎಂದು ಹೇಳಿದರು. ಕೋಟೆ ಬಾಗಿಲು ಸೇರಿದಂತೆ ಐತಿಹಾಸಿಕ ಕಟ್ಟಡಗಳ ಸೌಂದರ್ಯ ಹೆಚ್ಚಿಸುವ ಹಾಗೂ ಅಗತ್ಯ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಪುರಾತತ್ವ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ಇಲಾಖೆಯ ಇಂಜಿನಿಯರ್‌ಗಳನ್ನು ಸ್ಥಳಕ್ಕೆ ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ದೊರೆತಿದೆ ಎಂದರು.

ಐತಿಹಾಸಿಕ ಸ್ಮಾರಕಗಳು ಹಾಗೂ ದೇವಾಲಯಗಳಲ್ಲಿ ವಿದ್ಯುತ್ ಅಲಂಕಾರ ಮಾಡುವ ಸಂದರ್ಭದಲ್ಲಿ ಪುರಾತತ್ವ ಇಲಾಖೆಯ ಮಾರ್ಗಸೂಚಿಗಳನ್ನು ಪಾಲಿಸಬೇಕು. ಐತಿಹಾಸಿಕ ಕಟ್ಟಡಗಳ ಸ್ವರೂಪಕ್ಕೆ ಧಕ್ಕೆಯಾಗದ ರೀತಿಯಲ್ಲಿ ಬೆಳಕಿನ ವ್ಯವಸ್ಥೆ ಕಲ್ಪಿಸಲು ಇಲಾಖೆಯ ಅಧಿಕಾರಿಗಳು ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ. ಈ ಬಾರಿ ಶ್ರೀರಂಗಪಟ್ಟಣದ ಜೊತೆಗೆ ಗಂಜಾಂ ಪ್ರದೇಶವನ್ನೂ ವಿದ್ಯುತ್ ಅಲಂಕಾರದ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀರಂಗಪಟ್ಟಣ ಹೆರಿಟೇಜ್ ಸ್ಟಾಲ್‌ಗಳು ಹಾಗೂ ಆಹಾರ ಮಳಿಗೆಗಳನ್ನು ಸ್ಥಾಪಿಸುವ ಬೇಡಿಕೆಯನ್ನೂ ಪರಿಗಣಿಸಲಾಗುವುದು. ಸ್ಥಳೀಯ ಉತ್ಪನ್ನಗಳು, ಆಹಾರ ಹಾಗೂ ಕರಕುಶಲ ವಸ್ತುಗಳಿಗೆ ಅವಕಾಶ ಕಲ್ಪಿಸುವ ಮೂಲಕ ದಸರಾ ಕಾರ್ಯಕ್ರಮವನ್ನು ಜನಸ್ನೇಹಿಯಾಗಿಸಲಾಗುವುದು ಎಂದರು.

ಅಕ್ಟೋಬರ್ 11ರಿಂದ ಆರು ದಿನಗಳ ಕಾವೇರಿ ಆರತಿ ಕಾರ್ಯಕ್ರಮ: ಕಾವೇರಿ ನದಿಯ ಮಹತ್ವ, ನದಿ ಸಂರಕ್ಷಣೆಯ ಅಗತ್ಯತೆ ಹಾಗೂ ಕಾವೇರಿ ನಾಡಿನ ಸಂಸ್ಕೃತಿ ಮತ್ತು ಪರಂಪರೆಯ ವೈಭವವನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಅಕ್ಟೋಬರ್ 11ರಿಂದ ಆರು ದಿನಗಳ ಕಾಲ ಕೆ.ಆರ್.ಎಸ್.ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಹಾಗೂ ವೈಭವದಿಂದ ನಡೆಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಬಂಡಿಸಿದ್ದೇಗೌಡ ಹೇಳಿದರು.

ಕಾವೇರಿ ಆರತಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ವಿವಿಧ ಗಣ್ಯರು, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಅಗತ್ಯ ಮೂಲಸೌಕರ್ಯ, ವಿದ್ಯುತ್, ಅಲಂಕಾರ, ಸ್ವಚ್ಛತೆ, ಕುಡಿಯುವ ನೀರು ಹಾಗೂ ಸುರಕ್ಷತಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸಲಾಗುವುದು ಎಂದರು. ಆರು ದಿನಗಳ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸುವ ನಿರೀಕ್ಷೆಯಿದ್ದು, ಗ್ರಾಮೀಣ ಭಾಗದ ಜನರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಯಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಬಸ್ ವ್ಯವಸ್ಥೆ ಮಾಡುವ ಕುರಿತು ಕ್ರಮ ವಹಿಸಲಾಗಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ದಸರಾ ಹಾಗೂ ಕಾವೇರಿ ಆರತಿ ಕಾರ್ಯಕ್ರಮಗಳ ಯಶಸ್ಸಿಗೆ ಕನ್ನಡಪರ ಸಂಘಟನೆಗಳು, ಪ್ರಗತಿಪರರು, ಕಲಾವಿದರು, ವಿವಿಧ ಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರ ಅಗತ್ಯ. ಎಲ್ಲರ ಸಲಹೆಗಳನ್ನು ಪರಿಗಣಿಸಿ ಕಾರ್ಯಕ್ರಮಗಳನ್ನು ರೂಪಿಸಲಾಗುವುದು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಶ್ರೀರಂಗಪಟ್ಟಣದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ, ಕೋಟೆ ಪ್ರದೇಶದ ಅಭಿವೃದ್ಧಿ, ನಗರದ ಮೂಲಸೌಕರ್ಯ, ವಿದ್ಯುತ್ ಅಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ದಸರಾ ಸಂದರ್ಭದಲ್ಲಿ ಕೈಗೊಳ್ಳಬೇಕಾದ ವಿವಿಧ ಕಾಮಗಾರಿಗಳ ಕುರಿತು ಚರ್ಚಿಸಲಾಯಿತು. ಸಂಘ–ಸಂಸ್ಥೆಗಳ ಪ್ರತಿನಿಧಿಗಳು ವಿವಿಧ ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್, ಶ್ರೀರಂಗಪಟ್ಟಣ ತಹಸೀಲ್ದಾರ್ ಚೇತನಾ ಯಾದವ್, ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ಕೊಳ್ಳೇಗಾಲದಲ್ಲಿ ಮುಖ್ಯಮಂತ್ರಿಗಳಿಂದ ವಿವಿಧ ಅಭಿವೃದ್ಧಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ಕಾರ್ಯಕ್ರಮ

ತ್ವರಿತ ಸಿದ್ಧತೆಗೆ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಸೂಚನೆ

ಚಾಮರಾಜನಗರ: ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಸೆಪ್ಟೆಂಬರ್ 30ರಂದು ಕೊಳ್ಳೇಗಾಲದಲ್ಲಿ ನೆರವೇರಿಸಲಿದ್ದು, ಈ ಕಾರ್ಯಕ್ರಮಕ್ಕೆ ಎಲ್ಲ ಅಗತ್ಯ ಸಿದ್ಧತೆಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಳ್ಳೇಗಾಲ ಪಟ್ಟಣದ ಪ್ರವಾಸಿಮಂದಿರದಲ್ಲಿಂದು ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ನಡೆದ ಅಧಿಕಾರಿಗಳ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಶಿಷ್ಟಾಚಾರ ಅನುಸಾರ ಕಾರ್ಯಕ್ರಮ ನಿರ್ವಹಣೆಯಾಗಬೇಕು. ವೇದಿಕೆ ನಿರ್ಮಾಣ, ಅಲಂಕಾರ, ಬೃಹತ್ ಜರ್ಮನ್ ಟೆಂಟ್, ಸಭಿಕರು ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ, ಮೊಬೈಲ್ ಶೌಚಾಲಯ, ಕುಡಿಯುವ ನೀರು, ಉಪಹಾರ, ತಾತ್ಕಾಲಿಕ ಆರೋಗ್ಯ ಶಿಬಿರ ಸೇರಿದಂತೆ ಎಲ್ಲ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಬೇಕು ಎಂದು ಶಾಸಕರು ತಿಳಿಸಿದರು.

ಆಹ್ವಾನ ಪತ್ರಿಕೆ ಮುದ್ರಣ, ವಿತರಣೆ, ಗಣ್ಯರಿಗೆ ವಸತಿ ಗೃಹ, ವಾಹನಗಳ ನಿಲುಗಡೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಯಾವುದೇ ಲೋಪಕ್ಕೆ ಅವಕಾಶವಾಗದಂತೆ ಕೈಗೊಳ್ಳಬೇಕು ಎಂದರು.

ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಯಾಗಬೇಕಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಅನುಷ್ಠಾನ ಇಲಾಖೆ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಸಿದ್ಧತೆಗಳನ್ನು ಕೂಡಲೇ ಮಾಡಿಕೊಳ್ಳಬೇಕು. ಉದ್ಘಾಟನೆ, ಶಿಲಾನ್ಯಾಸ ಕಾಮಗಾರಿಗಳ ಕುರಿತ ಫಲಕವನ್ನು ಶಿಷ್ಟಾಚಾರ ಅನುಸಾರ ಸಿದ್ಧಪಡಿಸಬೇಕು ಎಂದು ಶಾಸಕರು ತಿಳಿಸಿದರು.

ವಿವಿಧ ಇಲಾಖೆಗಳು ನಿಗಮಗಳು, ಫಲಾನುಭವಿಗಳಿಗೆ ನೀಡಬಹುದಾದ ಸವಲತ್ತುಗಳನ್ನು ಪಟ್ಟಿ ಮಾಡಿ ಕಾರ್ಯಕ್ರಮದಲ್ಲಿ ಫಲಾನುಭವಿಗಳನ್ನು ಆಹ್ವಾನಿಸಿ ವಿತರಿಸಲು ಸೂಕ್ತ ಏರ್ಪಾಡು ಮಾಡಬೇಕು. ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸುವ ಸಂಬಂಧ ರಚಿಸಲಾಗಿರುವ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಮಿತಿಗಳು ತಮಗೆ ನೀಡಿರುವ ಜವಾಬ್ದಾರಿಯನ್ನು ಹೊಣೆಗಾರಿಕೆಯಿಂದ ನಿರ್ವಹಿಸಬೇಕು ಎಂದು ಶಾಸಕರಾದ ಎ.ಆರ್. ಕೃಷ್ಣಮೂರ್ತಿ ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ ಮಂಗಳವಾರ ಸಹ ಅಧಿಕಾರಿಗಳ ಸಭೆ ನಡೆಸಿ ಕಾರ್ಯಕ್ರಮದ ಸಿದ್ಧತೆಗೆ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸೂಚನೆ ನೀಡಲಾಗಿದೆ. ಕಾರ್ಯಕ್ರಮದ ಯಶಸ್ವಿಗೆ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು. ತಮ್ಮ ಇಲಾಖಾ ವ್ಯಾಪ್ತಿಯ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ ಸಂಬಂಧ ಎಲ್ಲ ಸಿದ್ಧತೆಗಳನ್ನು ಸಮರ್ಪಕವಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ತಹಶೀಲ್ದಾರ್ ಬಸವರಾಜು, ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಎಂಜಿನಿಯರ್ ಕಿರಣ್ ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಾಜೇಶ್ ಕುಮಾರ್, ಆಹಾರ ಇಲಾಖೆಯ ಉಪನಿರ್ದೇಶಕರಾದ ವಸುಂಧರ ಹೆಗಡೆ, ಕೃಷಿ ಇಲಾಖೆ ಜಂಟಿ ನಿರ್ದೇಶಕರಾದ ಭಾಸ್ಕರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಕರಿಕೆ ಗ್ರಾಮದಲ್ಲಿ ಪೋಷಣಯುಕ್ತ ಉತ್ಪನ್ನ ಮತ್ತು ಸ್ಥಳೀಯ ಆಹಾರಗಳ ಪ್ರದರ್ಶನ

ಉತ್ತಮ ಆರೋಗ್ಯಕ್ಕೆ ಸ್ಥಳೀಯ ಆಹಾರ ಪದ್ಧತಿ ಅಗತ್ಯ

ಮಡಿಕೇರಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯು? ಹಾಗೂ ಆರೋಗ್ಯ ಇಲಾಖೆ ಸಹಕಾರದೊಂದಿಗೆ ಕರಿಕೆ ಗ್ರಾಮದಲ್ಲಿ ಕರಿಕೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಗ್ರಾಮದ ಫಲಾನುಭವಿಗಳಿಗೆ ಪೋ?ಣ್ ವಾಟಿಕಗಳಲ್ಲಿ ಬೆಳೆಯುವ ಉತ್ಪನ್ನಗಳು ಹಾಗೂ ಸ್ಥಳೀಯವಾಗಿ ದೊರೆಯುವ ಋತುಮಾನಿಕ ಆಹಾರ ಪ್ರದರ್ಶನ ನಡೆಯಿತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಪ್ರಸನ್ನ ಕುಮಾರ್ ದಿನನಿತ್ಯದ ಆಹಾರದಲ್ಲಿ ಮತ್ತು ಚಿಕ್ಕ ಮಕ್ಕಳ ಪೂರಕ ಆಹಾರದಲ್ಲಿ ನಿಯಮತವಾಗಿ ಬಳಸುವಂತೆ ಉತ್ತೇಜಿಸುವಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿ ಎಂದರು.

ಶಿಶು ಹಾಗೂ ತಾಯಿ ಮರಣ ತಡೆಯುವುದು, ಜತೆಗೆ ಅಪೌಷ್ಟಿಕತೆ ಹೋಗಲಾಡಿಸಲು ಮುಂದಾಗಬೇಕಿದೆ. ಆ ದಿಸೆಯಲ್ಲಿ ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದರು.

ಕರಿಕೆ ಗ್ರಾ.ಪಂ.ಮಾಜಿ ಅಧ್ಯಕ್ಷರಾದ ಬಾಲಚಂದ್ರ ನಾಯರ್ ಅವರು ಮಾತನಾಡಿ ಉತ್ತಮ ಆಲೋಚನೆ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಉತ್ತಮ ಕರ್ತವ್ಯ ನಿ? ಅಗತ್ಯ. ಆ ನಿಟ್ಟಿನಲ್ಲಿ ಕೊರೋನಾ ಸಮಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಕರ್ತವ್ಯ ಪ್ರಜ್ಞೆ ಮೆಚ್ಚುವಂತದ್ದು ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಶ್ ರವರು ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಪೋಷಣ ಮಾಸಾಚರಣೆಯ 5 ಮುಖ್ಯ ಉದ್ದೇಶಗಳ ಕುರಿತು ವಿವರವಾಗಿ ಮಾಹಿತಿಯನ್ನು ನೀಡಿದರು. ಸ್ಥಳೀಯವಾದ ಆಹಾರ ಸಾಂಪ್ರದಾಯಿಕ ಆಹಾರ ಬಳಸಲು ಕರೆ ನೀಡಿದರು.

ಕರಿಕೆ ಆಯುಷ್ ಇಲಾಖೆಯ ವೈದ್ಯಾಧಿಕಾರಿ ಪಲ್ಲವಿ ಅವರು ಎಲ್ಲಾ ವಯೋಮಾನದವರಿಗೆ ಸಮತೋಲನ ಆಹಾರ ಮತ್ತು ವೈವಿಧ್ಯ ಆಹಾರ ಬಳಸುವ ನಿಟ್ಟಿನಲ್ಲಿ ಈ ದಿನ ವಿವಿಧ ರೀತಿಯ ಆಹಾರಗಳ ಪ್ರದರ್ಶನ ಮಾಡಿದ್ದೂ ಹಾಗೂ ಆಹಾರದ ಪಿರಮಿಡ್ ರಚನೆ ಮಾಡಿ ಅದರ ಮೂಲಕ ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಲಾಗುತ್ತಿದ್ದು, ಮಹಿಳೆಯರು ಜಾಗೃತರಾಗಿ ತಮ್ಮ ಹಾಗೂ ಕುಟುಂಬದವರ ಆರೋಗ್ಯವನ್ನು ವೃದ್ಧಿಪಡಿಸಿಕೊಳ್ಳಲು ತಿಳಿಸಿದರು.

ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮೇಪಾಡಂಡ ಸವಿತಾ ಕೀರ್ತನ್ ರವರು ಮಾತನಾಡಿ ಅಂಗನವಾಡಿ ವ್ಯಾಪ್ತಿಗೆ ಒಳಪಡುವ ಎಲ್ಲಾ ಫಲಾನುಭವಿಗಳ ಆರೋಗ್ಯ ಹಾಗೂ ಪೌಷ್ಟಿಕ ಮಟ್ಟ ಉತ್ತಮಪಡಿಸುವ ನಿಟ್ಟಿನಲ್ಲಿ ಸಮುದಾಯದ ಸಹಭಾಗಿತ್ವಕ್ಕೆ ಪೋಷಣ ಮಾಸಾಚರಣೆಯಲ್ಲಿ ಪ್ರಾಮುಖ್ಯತೆ ನೀಡಿತ್ತು ಎಂದರು.

ಮಕ್ಕಳ ಪೋ?ಕರು ಉತ್ತಮ ಪಾಲ್ಗೊಳ್ಳುವಿಕೆಯೊಂದಿಗೆ ಗ್ರಾಮದ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಅಭಿವೃದ್ಧಿಗೆ ಅಂಗನವಾಡಿ ಕಾರ್ಯಕರ್ತೆಯೊಂದಿಗೆ ಕೈಜೋಡಿಸುವಂತೆ ಅಂಗನವಾಡಿ ಕೇಂದ್ರದ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಕ್ಕೆ ಕರೆ ನೀಡಿದರು. ವೈಯಕ್ತಿಕ ಸ್ವಚ್ಛತೆ, ಆಹಾರದಲ್ಲಿ ವೈವಿಧ್ಯತೆ ಮತ್ತು ತೂಕದ ಮಹತ್ವದ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.

ಆರೋಗ್ಯ ಇಲಾಖೆಯ ವೈದ್ಯಾಧಿಕಾರಿ ಡಾ.ಅಭಿಲಾಶ್ ಅವರು ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಮಾಹಿತಿ ನೀಡಿದರು. ಕಗ್ಗೊಡ್ಲು ಅಂಗನವಾಡಿ ಕಾರ್ಯಕರ್ತೆ ವೀಣಾ ಕುಮಾರಿ ಅವರು ಭಾಗ್ಯಲಕ್ಷ್ಮಿ ಯೋಜನೆಯ ಕುರಿತು ಮಾಹಿತಿ ನೀಡಿದರು. ಗಾಂಧಿನಗರ ಅಂಗನವಾಡಿ ಕಾರ್ಯಕರ್ತೆ ಚೈತ್ರಾ ಅವರು ಅಂಗನವಾಡಿ ಕೇಂದ್ರದಲ್ಲಿ ಫಲಾನುಭವಿಗಳಿಗೆ ನೀಡಲಾಗುವ ಆಹಾರ ಪದಾರ್ಥಗಳು ಹಾಗೂ ಆಹಾರ ಮೆನು ಕುರಿತು ವಿವರಿಸಿದರು. ಕಾಂತೂರು ಅಂಗನವಾಡಿ ಕಾರ್ಯಕರ್ತೆ ಗೃಹಲಕ್ಷ್ಮಿ ಯೋಜನೆಯ ಕುರಿತು ಮಾಹಿತಿ ನೀಡಿದರು.

ತ್ರಿವೇಣಿ ಮನೋವೈಜ್ಞಾನಿಕ ಕಥಾಸ್ಪರ್ಧೆ; ಗಾಯತ್ರಿ ಸುಂದರೇಶ್ ಪ್ರಥಮ

ಮೈಸೂರು: ಲೇಖಿಕಾ ಸಾಹಿತ್ಯ ವೇದಿಕೆ ಮತ್ತು ತ್ರಿವೇಣಿ ಶಂಕರ್ ಸಾಹಿತ್ಯ ಪ್ರತಿಷ್ಠಾನ ಜಂಟಿಯಾಗಿ ಲೇಖಕಿ ತ್ರಿವೇಣಿ ಜನ್ಮದಿನದ ಅಂಗವಾಗಿ ಆಯೋಜಿಸಿದ ಮನೋವ



ಸಿನಿಮಾ ವರದಿ: ಬಿ.ಜಿ.ರವಿಕುಮಾರ್



ಸ್ವಯಂ ಕೃಷಿ ಆವರಣದ ಅನಾವರಣ

ಯುವ ಜನಾಂಗಕ್ಕೆ ಅರಿವು ಮೂಡಿಸುವ ಸಲುವಾಗಿ ಬೆಂಗಳೂರು ತಾವರೆಕೆರೆ ಹೋಬಳಿ, ಕೋಲೂರು ಗ್ರಾಮದಲ್ಲಿ ಕೃಷಿಕ ರವಿ. ಕೆ.ಎಸ್ ಸಾರಥ್ಯದಲ್ಲಿ ಸ್ವಯಂ ಕೃಷಿ ಪರಿಕಲ್ಪನೆಯ, ಕೃಷಿ ಥೀಮ್ ಪಾರ್ಕ್‌ನ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ಪತ್ರಕರ್ತ ರವೀಂದ್ರಭಟ್, ಚನ್ನೆಗೌಡ ಮತ್ತು ಜೋಗಿ. ಇವರುಗಳೊಂದಿಗೆ ಡಾ.ಬಿ.ಟಿ.ರುದ್ರೇಶ್, ಸರ್ಕಾರಿ ಅಧಿಕಾರಿ ಹಿರೇಮಠ್ ಮುಂತಾದವರ ಉಪಸ್ಥಿತಿಯಲ್ಲಿ ಥೀಮ್ ಪಾರ್ಕ್ ಅನಾವರಣಗೊಂಡಿತು.

ಇದಕ್ಕೂ ಮುನ್ನ ಗಣ್ಯರುಗಳನ್ನು ಎತ್ತಿನಗಾಡಿಯಲ್ಲಿ ಕ್ಷೇತ್ರ ಪರಿಕ್ರಮ. ನಂತರ ಉಳುಮೆ, ಬೀಜ ಬಿತ್ತನೆಯನ್ನು ಸಾಂಕೇತಿಕವಾಗಿ ಮಾಡಿಸಲಾಯಿತು. ಬರುವ ತಲೆಮಾರುಗಳಿಗೆ ಕೃಷಿಯ ಬಗ್ಗೆ ಮಾಹಿತಿಗಾಗಿ, ಕೃಷಿಯ ಪರಿಪೂರ್ಣ ವಿಷಯಗಳನ್ನು ತಿಳಿಸುವುದು ಅಗತ್ಯವಾಗಿದೆ. ಅದಕ್ಕಾಗಿ ಸ್ವಯಂ ಕೃಷಿ ಹುಟ್ಟಿಕೊಂಡಿರುವುದು ಹೆಮ್ಮೆಯ ವಿಷಯ ಎಂದು ಅತಿಥಿಗಳು ಅಭಿಪ್ರಾಯಪಟ್ಟರು.

ಪ್ರಾರಂಭದಿಂದಲೂ ಸಹಕಾರ ಮತ್ತು ಸಲಹೆ ನೀಡುತ್ತಾ ಬಂದಿರುವ ಹಿರಿಯ ನಟ ಸುಚೇಂದ್ರ ಪ್ರಸಾದ್ ಮಾತನಾಡಿ, ಸ್ವಯಂ ಕೃಷಿ ಇಂದಿನ ಯುವ ಜನಾಂಗಕ್ಕೆ ಕನ್ನಡಿಯಾಗಿದೆ. ಮಾತ್ರವಲ್ಲದೆ ಚಿತ್ರರಂಗಕ್ಕೂ

ಶೂಟಿಂಗ್ ನಡೆಸಲು ಸಹಕಾರಿಯಾಗಿದೆ. ಉದ್ಯಮಿ, ಕೃಷಿಕ ರವಿ.ಕೆ.ಎಸ್ ಮುಂದೆ ಚಿತ್ರ ನಿರ್ಮಾಣ ಮಾಡಲು ಚಿಂತನೆ ನಡೆಸಿದ್ದಾರೆ. ಚಿತ್ರರಂಗಕ್ಕೆ ಇಂತಹವರ ಸೇವೆ ಅವಶ್ಯಕವಾಗಿದೆ. ಮುಂದಿನ ದಿನಗಳಲ್ಲಿ ಕಲಾವಿದರುಗಳನ್ನು ಕರೆಸಿ ಮತ್ತಷ್ಟು ವಿಷಯ ಪ್ರಸಾರ ಮಾಡಲು ಕ್ರಮ ವಹಿಸುತ್ತೇನೆಂದು ಹೇಳಿದರು.

ಒಂಬತ್ತು ರಸಗಳು, ಒಂದು ಕಥೆ ಮತ್ತು ಅಂತ್ಯ

ಚಂದನವನದಲ್ಲಿ ಮೊದಲು ಎನ್ನುವಂತೆ ಒಂಬತ್ತು ರಸಗಳು, ಒಂದು ಕಥೆ ಮತ್ತು ಅಂತ್ಯ ಇರುವ ರೌಶಾಬಿ ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ಸ್ಫೂರ್ತಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ಶರಣಪ್ಪ ಅಂಗಡಿ ನಿರ್ಮಾಣ ಮಾಡಿದ್ದಾರೆ.

ನಟ ಎಸ್.ಆರ್.ಪ್ರಮೋದ್ ಆಕ್ಷನ್ ಕಟ್ ಹೇಳಿರುವ ಆರನೇ ಚಿತ್ರ ಇದು. ಪ್ರಚಾರದ ಕೊನೆ ಹಂತವಾಗಿ ಟ್ರೇಲರ್ ಬಿಡುಗಡೆ ನಡೆಯಿತು.

ಆಯೂರು ಸಿನಿಮಾಕ್ಕೆ ಕಥೆ,ಚಿತ್ರಕಥೆ,ಸಂಭಾಷಣೆ, ಸಂಕಲನ ಜತೆಗೆ ನಾಯಕನಾಗಿ* ಅಭಿನಯಿಸಿದ್ದಾರೆ. ಮಂಜುಪ್ರೀತಿ, ರೇಖಾರಮೇಶ್ ನಾಯಕಿಯರು. ಎಸ್. ಆರ್.ಪ್ರಮೋದ್ ಮುಂತಾದವರು ಬಣ್ಣ ಹಚ್ಚಿದ್ದಾರೆ. ಛಾಯಾಗ್ರಹಣ ಮೈಸೂರು ಸೋಮು, ಹಿನ್ನೆಲೆ ಸಂಗೀತ ಕೆವಿನ್, ಡಿಐ ಕಿಶೋರ್ ಕುಮಾರ್ ಅಕ್ಕನ, ಸ್ಟುಡಿಯೋ ಅನಿಲ್.ಸಿ.ಆರ್ ಅವರದಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಕಥೆಯಲ್ಲಿ ಒಂಬತ್ತು ರಸಗಳು ಇರುವುದರಿಂದ, ಪ್ರತಿಯೊಂದರಿಂದ ಒಂದು ಅಕ್ಷರ ತೆಗೆದುಕೊಂಡು ಶೀರ್ಷಿಕೆ ಇಡಲು ಚಿಂತನೆ ನಡೆಸಲಾಗಿತ್ತು. ಆದರೆ ಮಾರುದ್ದ ಬರುವ ಕಾರಣ ಸಿನಿಮಾದಲ್ಲಿ ಕಾಣಿಸಿಕೊಳ್ಳುವ ಮೂರು ಪ್ರಮುಖ ಪಾತ್ರಗಳ ಮೊದಲ ಅಕ್ಷರವನ್ನು ಬಳಸಿಕೊಂಡು ಟೈಟಲ್ ಇಡಲಾಗಿದೆ. ರೌಡಿ ಪಾತ್ರಕ್ಕೆ ರೌದ್ರ ಅಂತಲೂ, ಶಾಲಿನಿ ಹೆಸರನ್ನು ಶಾಂತ ಎಂದು, ಹಾಗೆಯೇ ಬಿಂದು ಅವಳನ್ನು ಭೀಬತ್ಸ, ಹೀಗೆ ಮೂರು ಸೇರಿಸಿದರೆ ರೌಶಾಬಿ ಹೆಸರು ಬರುತ್ತದೆ. ಇದಕ್ಕೆ ಬೇರೆ ಅರ್ಥ ಏನಿಲ್ಲ. ಹೆಚ್ಚಿನ ವಿವರಕ್ಕೆ ಚಿತ್ರ ನೋಡಿದರೆ ತಿಳಿಯುತ್ತದೆ. ಮೈಸೂರು, ನೆಲಮಂಗಲ ರೆಸಾರ್ಟ್‌ವೊಂದರಲ್ಲಿ ಇಪ್ಪತ್ತು ದಿನಗಳ ಕಾಲ ಒಂದೇ ಹಂತದಲ್ಲಿ ಚಿತ್ರೀಕರಣ ಮುಗಿಸಲಾಗಿದೆ. ಕಲಾವಿದರು, ತಂತ್ರಜ್ಞರು ಸಹಕಾರ ನೀಡಿದ್ದರಿಂದಲೇ, ಕಳೆದ ವರ್ಷ ಶುರು ಮಾಡಿ ಇದೇ ತಿಂಗಳಲ್ಲಿ ಜನರಿಗೆ ತೋರಿಸಲಾಗುತ್ತಿದೆ ಎಂದು ಎಸ್.ಆರ್.ಪ್ರಮೋದ್ ಮಾಹಿತಿ ನೀಡಿದರು.

ಸ್ಪಾರ್ಕ್ ಮೂಲಕ ನವನಟ ಅಭಯ್ ವಸಿಷ್ಠ ಎಂಟ್ರಿ

ಇದೇ ವಾರ ಸಪ್ಟೆಂಬರ್ 25ರಂದು ರಾಜ್ಯಾದ್ಯಂತ ತೆರೆಗೆ ಬರಲು ಸಿದ್ಧವಾಗಿರುವ ಚಿತ್ರ ಸ್ಪಾರ್ಕ್. ಚಿತ್ರದ ಸುದ್ದಿಗೋಷ್ಠಿಯಲ್ಲಿ ಸಿನೆಮಾ ಕುರಿತಾದ ಇನ್ನಷ್ಟು ವಿಶೇಷಗಳನ್ನು ಹಂಚಿಕೊಳ್ಳಲಾಯಿತು.

ನಿರಂಜನ್ ಸುಧೀಂಧ್ರ ನಾಯಕರಾಗಿ ಒಂದಷ್ಟು ಚಿತ್ರಗಳಲ್ಲಿ ನಟಿಸಿದ್ದಾರೆ. ಆದರೆ ಅವೆಲ್ಲವನ್ನು ಮೀರಿಸುವಂಥ ಚಿತ್ರ ಸ್ಪಾರ್ಕ್. ಈ ಮಾತನ್ನು ಚಿತ್ರತಂಡ ಹೇಳಿಕೊಂಡೇ ಬರುತ್ತಿದೆ. ಇದೀಗ ಚಿತ್ರದ ಟ್ರೇಲರ್ ಕೂಡ ಅದನ್ನೇ ಸಾರುತ್ತಿದೆ. ಇತ್ತೀಚೆಗಷ್ಟೇ ಉಪೇಂದ್ರ ಅವರಿಂದ ಗದಗದಲ್ಲಿ ಬಿಡುಗಡೆಗೊಂಡ ಸ್ಪಾರ್ಕ್ ಚಿತ್ರದ ಟ್ರೇಲರ್ ಎಲ್ಲರಲ್ಲಿ ಕುತೂಹಲ ಮೂಡಿಸಿದೆ. ಸೋಮವಾರ ಬೆಂಗಳೂರಿನ ಮಾಧ್ಯಮದ ಮುಂದೆ ಟ್ರೇಲರ್ ಪ್ರದರ್ಶಿಸಿದ ಚಿತ್ರತಂಡ, ಹೊಸ ಕಲಾವಿದ ಅಭಯ್ ವಸಿಷ್ಠರನ್ನು ಪರಿಚಯಿಸಿತು.

ಅಭಯ್ ವಸಿಷ್ಠ ಸ್ಪಾರ್ಕ್ ಚಿತ್ರದ ನಿರ್ಮಾಪಕರ ಪುತ್ರ. ಗರಿಮಾ ಅವಿನಾಶ್ ವಸಿಷ್ಠ ದಂಪತಿ ನಿರ್ಮಾಣದ ಈ ಚಿತ್ರದಲ್ಲಿ ಪುತ್ರ ಅಭಯ್ ವಸಿಷ್ಠ ಖಳನಟನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ನಿರ್ಮಾಪಕರ ಪುತ್ರ, ಸ್ಫುರದ್ರೂಪಿ, ಪ್ರತಿಭಾವಂತ. ಆದರೆ ನಾಯಕ ನಟನಾಗಲು ಬಯಸದೆ ಖಳನಾಗಿದ್ದೇಕೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅಭಯ್, ತಾವು ವಿದೇಶದಲ್ಲೇ ಹುಟ್ಟಿ ಬೆಳೆದ ಕಾರಣ ಕನ್ನಡ ಭಾಷೆ ಅರಿತಿಲ್ಲ. ವಿದೇಶಿ ರಂಗಭೂಮಿಯ ಅನುಭವ ಮಾತ್ರ ಇದೆ. ಅದು ಈ ಸಿನೆಮಾ ಕ್ಷೇತ್ರಕ್ಕಿಂತ ತುಂಬ ವಿಭಿನ್ನ. ಮುಂದೆ ಕನ್ನಡ ಭಾಷೆ ಮತ್ತು ಸಿನೆಮಾ ಬಗ್ಗೆ ಹೆಚ್ಚು ಕಲಿತ ಬಳಿಕ ಕನ್ನಡದಲ್ಲಿ ನಾಯಕನಾಗುವ ಕನಸಿದೆ. ಸದ್ಯಕ್ಕೆ ಸ್ಪಾರ್ಕ್ ನಲ್ಲಿ ಖಳನ ಪಾತ್ರವಾದರೂ ತುಂಬ ಚೆನ್ನಾಗಿದೆ. ಹಾಗಾಗಿಯೇ ಒಪ್ಪಿಕೊಂಡೆ ಎಂದರು.

"ನನಗೆ ಖಳನಾಗಲು ತಕ್ಕ ಎದುರಾಳಿಯಂತೆ ಅಭಯ್ ಇದ್ದರು. ಅವರ ಎತ್ತರ ನನಗೆ ಹೊಂದಿಕೊಳ್ಳುವ ಹಾಗೆ ಇತ್ತು. ಆ ಯಕ್ಷನ್ ದೃಶ್ಯಗಳಲ್ಲಿ ಅವರ ಮುಖ ಟೊಮೆಟೊ ಹಣ್ಣಂತೆ ಕೆಂಪಾಗುತ್ತಿತ್ತು. ವಿದೇಶದಿಂದ ಬಂದರೂ ಚೆನ್ನಾಗಿ ನಟನೆ ಮಾಡಿದ್ದಾರೆ. ಪರದೆ ಮೇಲೆ ಕಂಡಾಗ ನಿಜಕ್ಕೂ ನಿಮಗೆ ಒಬ್ಬ ಒಳ್ಳೆಯ ನಟನ ದರ್ಶನವಾಗಲಿದೆ" ಎಂದು ನಿರಂಜನ್ ಸುಧೀಂದ್ರ ಹೇಳಿದರು. ತಮ್ಮ ಪಾತ್ರ ಸೇರಿದಂತೆ ಒಟ್ಟು ಚಿತ್ರವನ್ನು ನೋಡಿದಾಗ ಇದು ನನ್ನ ವೃತ್ತಿ ಬದುಕಿನಲ್ಲಿ ದೊಡ್ಡ ಯಶಸ್ಸು ತರುವ ಭರವಸೆ ಮೂಡಿಸಿದೆ ಎಂದರು. ಭ್ರಷ್ಟಾಚಾರದ ವಿರುದ್ಧದ ಚಿತ್ರವಾದರೂ ಕಥೆ ಮನರಂಜನಾತ್ಮಕವಾಗಿ ಸಾಗುತ್ತದೆ. ತಾತಂದಿರಿಂದ

ಚಿಕ್ಕ ಮಕ್ಕಳವರೆಗೂ ಇಷ್ಟವಾಗುವಂಥ ವಿಚಾರ ಚಿತ್ರದಲ್ಲಿದೆ" ಎಂದರು ನಿರಂಜನ್.

ನಿರ್ದೇಶಕ ಮಹಾಂತೇಶ್ ಹಂದ್ರಾಳ್ ಮಾತನಾಡಿ, "ನಿರ್ಮಾಪಕರು ಚಿತ್ರಕ್ಕಾಗಿ ನಾನು ಕೇಳಿದ ಎಲ್ಲ ಕಲಾವಿದರನ್ನು ಕೊಟ್ಟು ಸಹಕರಿಸಿದ್ದಾರೆ. ಅವರ ಸಹಕಾರದಿಂದಾಗಿಯೇ ಚಿತ್ರ ಚೆನ್ನಾಗಿ ಮೂಡಿಬಂದಿದೆ" ಎಂದರು.

ಲವ್ಲಿ ಸ್ಟಾರ್ ಪ್ರೇಮ್ ಮೊದಲ ಬಾರಿಗೆ ಖಳನಾಗಿ ನಟಿಸಿರುವ ಚಿತ್ರ ಇದು. ನಿರ್ಮಾಪಕರ ಗುಣಗಾನ ಮಾಡಿದ ಅವರು, "ಸ್ಟಾರ್ ಸಿನೆಮಾ ಹಿಂದೆ ಹೋಗದೆ ಹೊಸಬರ ಚಿತ್ರಮಾಡಿದ್ದಾರೆ. ಒಳ್ಳೆಯ ಚಿತ್ರವನ್ನೇ ಮಾಡಿದ್ದಾರೆ. ನನ್ನದು ಭ್ರಷ್ಟ ಪೊಲೀಸ್ ಅಧಿಕಾರಿಯ ಪಾತ್ರ. ಆದರೆ ಅದೇ ಪೊಲೀಸ್ ವೈಯಕ್ತಿಕವಾಗಿ ಸ್ಟೈಲಿಷ್ ಆಗಿ ಕಾಣಿಸುವಂಥ ಪ್ರಯತ್ನ ಮಾಡಿದ್ದೇನೆ" ಎಂದರು. ಹಾಸ್ಯನಟ ಧರ್ಮಣ್ಣ ಕಡೂರು ಅವರ ಪ್ರಕಾರ, "ನಿರಂಜನ್ ಮತ್ತು ಪ್ರೇಮ್ ಚಿತ್ರದ ಕೇಂದ್ರಬಿಂದುಗಳು" ಅಂದರು. ನಿರಂಜನ್ ಜೊತೆ ತಾವು ಕೂಡ ಪತ್ರಕರ್ತರಾಗಿ ಕಾಣಿಸಲಿದ್ದು, ತಂಬ್ ನೇಲ್ ಪತ್ರಕರ್ತನಾಗಿ ನಗಿಸುವ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕಾರಿ ನಿರ್ಮಾಪಕ ವಿಶ್ವಾಸ್ ಎಮ್. ನಾಯರ್ ಭಾಗಿಯಾಗಿದ್ದರು.

ದೇವಿ ಮಹಾತ್ಮೆ ಡಿ. 4ಕ್ಕೆ ರಿಲೀಸ್

ದೇವಿ ಮಹಾತ್ಮೆ ಚಿತ್ರದ ಬಗ್ಗೆ ನಿರ್ದೇಶಕ ನಾಗರಾಜ್ ಸೋಮಾಯಾಜಿ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ.

ಟೀಸರ್ ಮೂಲಕ ಪ್ರೇಕ್ಷಕರ ಗಮನ ಸೆಳೆದಿರುವ ಈ ಚಿತ್ರವು ಯಾವುದೇ ಪೌರಾಣಿಕ ಅಥವಾ ಭಕ್ತಿ ಪ್ರಧಾನ ಸಿನಿಮಾವಲ್ಲ, ಇಂದಿನ ಸಮಾಜದ ಮೌಲ್ಯಗಳನ್ನು ಕಟ್ಟಿಕೊಡುವ ವಿಭಿನ್ನ ಸೋಷಿಯಲ್ ಡ್ರಾಮಾ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಈ ಚಿತ್ರವು ಡಿಸೆಂಬರ್ 4ರಂದು ತೆರೆಗೆ ಬರಲಿದೆ. ಕುಂದಾಪುರ ಸೇರಿದಂತೆ ಕರಾವಳಿ ಭಾಗದಲ್ಲಿ ದೇವಿ ಮಹಾತ್ಮೆ ಎಂಬ ಯಕ್ಷಗಾನ ಪ್ರಸಂಗ ಮತ್ತು ಬಯಲಾಟ ಅತ್ಯಂತ ಪ್ರಸಿದ್ಧ. ಚಿತ್ರದ ಕಥೆಗೂ ಹಾಗೂ ಆ ಪ್ರಸಂಗಕ್ಕೂ ನೇರ ನಂಟಿರುವುದರಿಂದ, ಜೊತೆಗೆ ಚಿತ್ರದಲ್ಲಿ ಅದರ ಕೆಲವು



ತುಣುಕುಗಳು ಇರುವುದರಿಂದ ಈ ಶೀರ್ಷಿಕೆಯನ್ನು ಇಡಲಾಗಿದೆ. ಪ್ರೇಕ್ಷಕರಿಗೆ ಕಥೆ ಸಾಗುತ್ತಾ ಇದು ಯಾಕೆ ದೇವಿ ಮಹಾತ್ಮೆ ಎಂಬುದು ಆಪ್ತವಾಗಿ ಕನೆಕ್ಟ್ ಆಗುತ್ತದೆ" ಎಂದಿದ್ದಾರೆ.ಚಿತ್ರದಲ್ಲಿ ಹಿರಿಯ ನಟ ರಂಗಾಯಣ ರಘು ಅವರದ್ದು ಅತ್ಯಂತ ತೂಕದ ಮತ್ತು ಈವರೆಗೆ ಕಾಣಿಸದ ವಿಶಿಷ್ಟ ಪಾತ್ರ ಎಂದು ನಿರ್ದೇಶಕರು ವಿವರಿಸಿದ್ದಾರೆ. "ರಂಗಾಯಣ ರಘು ಅವರು ಈ ಚಿತ್ರದಲ್ಲಿ ಯಾವುದೇ ಅಬ್ಬರ, ಆರ್ಭಟವಿಲ್ಲದ ಅಭಿನಯ ನೀಡಿದ್ದಾರೆ. ಒಬ್ಬ ತಂದೆಯಾಗಿ, ಮನುಷ್ಯ ಮನುಷ್ಯನಿಗೆ ಹೇಗೆ ಸ್ಪಂದಿಸಬೇಕು ಎಂಬುದನ್ನು ಅವರ ಪಾತ್ರದ ಪ್ರತಿ ಫ್ರೇಮ್‌ನಲ್ಲೂ ಅದ್ಭುತವಾಗಿ ತೆರೆದಿಟ್ಟಿದ್ದಾರೆ. ಚಿತ್ರದಲ್ಲಿ ಬಹುತೇಕ ರಂಗಭೂಮಿ ಪ್ರತಿಭೆಗಳೇ ನಟಿಸಿದ್ದು, ಪ್ರಶಾಂತ್ ಹಿರೇಮಠ್ ಮೈಸೂರು, ಪಿ.ಡಿ. ಸತೀಶ್, ಅರವಿಂದ್ ಕುಪ್ಪೀಕರ್, ಬಾಸುಮ ಕೊಡಗು, ರಘು ಪಾಂಡೇಶ್ವರ್, ಶ್ವೇತಾ ಶ್ರೀನಿವಾಸ್, ಮೋಹನ್ ಶಣೈ, ಹಾಗೂ ಪ್ರತಿಮಾ ನಾಯ್ಕ್ ಸೇರಿದಂತೆ ಹಲವು ಕಲಾವಿದರು ಚಿತ್ರದ ಗಟ್ಟಿತನವನ್ನು ಹೆಚ್ಚಿಸಿದ್ದಾರೆ" ಎಂದು ತಿಳಿಸಿದ್ದಾರೆ. ಕಥೆಯ ಮೂಲ ತಿರುಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಟ್ಟಿಕೊಡುವ ಟ್ರೈಲರ್ ಸದ್ಯದಲ್ಲೇ ಬಿಡುಗಡೆಯಾಗಲಿದೆ"

ಪ್ರೊಡಕ್ಷನ್ ನಂಬರ್ ಒನ್ ಚಿತ್ರದಲ್ಲಿ ಖುಷಿ

ಇನ್ಫೆಂಟ್ ಸ್ಕೂಲ್ ಆಫ್ ಫ್ಯಾಶನ್ಸ್ ಆಯೋಜಿತ ಮಿಸ್ಟರ್ ಮತ್ತು ಮಿಸೆಸ್ ಇಂಡಿಯಾ 2026 ಸ್ಪರ್ಧೆಗಳ ಫಲಿತಾಂಶ ಪ್ರಕಟಿಸಲಾಗಿದೆ. ಕನ್ನಡ ಕಿರುತೆರೆ ಹಿರಿತೆರೆ ನಟಿ ಕವಿತಾ ಖುಷಿ ಮಿಸೆಸ್ ಕರ್ನಾಟಕ 2026 ವಿಭಾಗದಲ್ಲಿ ಪ್ರಶಸ್ತಿ ಮೂಡಿಗೇರಿಸಿಕೊಂಡರು.

ಘಮ, ಇದು ಒಂದು ಸೋಪಿನ ಕಥೆ

ಕನ್ನಡ ಧಾರಾವಾಹಿಗಳಿಗೆ ಕಥೆ , ಚಿತ್ರಕಥೆ ಬರೆಯುತ್ತಿರುವಎಂ ವಿದ್ಯಾಲಕ್ಷ್ಮಿ ಪ್ರಹ್ಲಾದ್ "ಘಮ" ಎಂಬ ಕಿರುಚಿತ್ರಕ್ಕೆ ನಿರ್ದೇಶಕಿಯಾಗಿದ್ದಾರೆ. "ಘಮ" ಕಿರುಚಿತ್ರಕ್ಕೆ "ಪರಿಮಳಕ್ಕೆ ಪರವಶ" ಎಂಬ ಅಡಿಬರಹವಿದೆ. ಹಳ್ಳಿಯ ಮುಗ್ಧ ಬಾಲೆ ಹಾಗೂ ಒಂದು ಘಮಘಮಿಸುವ ಸೋಪಿನ ನಡುವೆ ಹೆಣೆದಿರುವ ಕಥೆಯಿದು. ಹದಿನಾಲ್ಕು ನಿಮಿಷಗಳಲ್ಲೇ ಈ ಕಿರುಚಿತ್ರ ಎಲ್ಲರ ಗಮನ ಸೆಳೆಯುತ್ತದೆ. ಆದರ್ಶ ಅಯ್ಯಂಗಾರ್ ಅವರು ಶ್ರೀಕೃಷ್ಣ ಪ್ರೊಡಕ್ಷನ್ಸ್ ಲಾಂಛನದಲ್ಲಿ ಈ ಕಿರುಚಿತ್ರವನ್ನು ನಿರ್ಮಿಸಿದ್ದಾರೆ. ಇತ್ತೀಚೆಗೆ ಈ ಕಿರುಚಿತ್ರದ ಅನಾವರಣ ನೆರವೇರಿತು.

ಜೋಗಿ, ಭಾವನ ಬೆಳಗೆರೆ, ಶ್ರೀವಿದ್ಯಾ ರಾಜ್ ಹಾಗೂ ವೀರ್ ಸಮರ್ಥ್ ಈ ಕಿರುಚಿತ್ರವನ್ನು ಬಿಡುಗಡೆ ಮಾಡಿದರು. ಕಿರುಚಿತ್ರದ ವೀಕ್ಷಣೆಯ ನಂತರ ಗಣ್ಯರು ಪ್ರೋತ್ಸಾಹದ ನುಡಿಗಳನ್ನಾಡಿದರು.

ನಿರ್ದೇಶಕಿ ಎಂ ವಿದ್ಯಾಲಕ್ಷ್ಮಿ ಪ್ರಹ್ಲಾದ್ ಮಾತನಾಡಿ, ಇದು ನನ್ನ ನಿರ್ದೇಶನದ ಮೊದಲ ಹೆಜ್ಜೆ,

ಕಥೆ ಕೇಳಿದ ತಕ್ಷಣ ನಿರ್ಮಾಪಕ ಆದರ್ಶ ಅಯ್ಯಂಗಾರ್ ಕಥೆ ಮೆಚ್ಚಿಕೊಂಡು ನಿರ್ಮಾಣಕ್ಕೆ ಮುಂದಾದರು. ರಕ್ಷಿತ್ ತೀರ್ಥಹಳ್ಳಿ, ನಿರ್ದೇಶನದಲ್ಲಿ ನನ್ನ ಗುರುಗಳು.

ಕಥೆಗಾರರು ಕಟ್ಟಿದ ಕಥೆಯನ್ನು ಛಾಯಾಗ್ರಾಹಕ ಶಾಂತಿ ಸಾಗರ್ ಅದ್ಭುತವಾಗಿ ಛಾಯಾಗ್ರಹಣ ಮಾಡಿದ್ದಾರೆ. ಇದಕ್ಕೆ ಡಬ್ಬಿಂಗ್ ಮಾಡಿಲ್ಲ. ಸ್ಥಳದಲ್ಲಿ ಸಿಂಕ್ ಸೌಂಡ್ ಮಾಡಲಾಗಿದೆ. ನನ್ನ ಬಾಲ್ಯದ ಕೆಲವು ಘಟನೆಗಳೇ ಈ ಕಥೆ ಬರೆಯಲು ಸ್ಫೂರ್ತಿ. ಆದರ್ಶ ಅಯ್ಯಂಗಾರ್, ಅರ್ಪಿತಾ ಮೋಹಿತೆ, ವಜ್ರ ಭಾರ್ಗವಿ, ಪ್ರಜ್ಞಾ ಶೆಟ್ಟಿ, ಈ ಕಿರುಚಿತ್ರದಲ್ಲಿ ನಟಿಸಿದ್ದಾರೆ. ಇಡೀ ತಂಡದ ಸಹಕಾರದಿಂದ ಕಿರುಚಿತ್ರ ನಿರ್ಮಾಣವಾಗಿದೆ ಎಂದರು. ನನ್ನ ಮಗಳು ಗೌರಿ ಮನೋಹರಿ "ಘಮ" ಶೀರ್ಷಿಕೆ ನೀಡಿದ್ದು ಎಂದು ನಿರ್ದೇಶಕಿ ವಿದ್ಯಾಲಕ್ಷ್ಮೀ ಈ ಸಂದರ್ಭದಲ್ಲಿ ನೆನಪಿಸಿಕೊಂಡರು.

ನಟ, ನಿರ್ಮಾಪಕ ಆದರ್ಶ್ ಅಯ್ಯಂಗಾರ್ ಮಾತನಾಡಿ, ವಿದ್ಯಾಲಕ್ಷ್ಮೀ ಅವರು ಎಂಟು ತಿಂಗಳ ಹಿಂದೆ ಈ ಕಥೆ ಹೇಳಿದ್ದರು. ಮನಸ್ಸಿಗೆ ತುಂಬ ನಾಟಿದ ಕಥೆ, 1990 ರ ಸೊಗಡನ್ನು ಕಿರುಚಿತ್ರ ಮಾಡುವುದು ಸವಾಲಿನ ಕೆಲಸವಾಗಿತ್ತು.ಗುಣಮಟ್ಟಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ನಾಲ್ಕು ದಿನಗಳ ಕಾಲ ಮಲೆನಾಡಿನ ಭಾಗದಲ್ಲಿ ಚಿತ್ರೀಕರಣ ಮಾಡಲಾಗಿದೆ ಎಂದರು.

ನಟಿ ಪ್ರಜ್ಞಾ ಶೆಟ್ಟಿ ಮಾತನಾಡಿ, ಕಥೆ ಇಷ್ಟವಾಯಿತು. ಎಂದರು

"ರಾಮರಸ" ಚಿತ್ರದ ಪ್ರಮುಖ ಪಾತ್ರದಲ್ಲಿ ಅದಾ ಶರ್ಮ

'ರಾಮರಸ' ತನ್ನ ಚಿತ್ರೀಕರಣದ ಎಲ್ಲಾ ಹಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಈಗಾಗಲೇ ದೊಡ್ಡ ತಾರಾಗಣವನ್ನು ಹೊಂದಿರುವ ಈ ಚಿತ್ರಕ್ಕೆ ಬಾಲಿವುಡ್ ಹಾಗೂ ದಕ್ಷಿಣ ಭಾರತದ ಖ್ಯಾತ ನಟಿ *ಅದಾ ಶರ್ಮಾ ಚಿತ್ರದ ಪ್ರಮುಖ ಪಾತ್ರವೊಂದರ ಮೂಲಕ ತಂಡವನ್ನು ಸೇರಿಕೊಂಡಿದ್ದಾರೆ.

ತಮ್ಮ ವೈವಿಧ್ಯಮಯ ನಟನೆಯಿಂದ ಗುರುತಿಸಿಕೊಂಡಿರುವ ಅದಾ ಶರ್ಮಾ, ಈ ಸಿನಿಮಾದಲ್ಲಿ ಅತ್ಯಂತ ವಿಭಿನ್ನ ಮತ್ತು ಪ್ರಭಾವಶಾಲಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಚಿತ್ರದ ತಾರಾಬಳಗಕ್ಕೆ ಮತ್ತಷ್ಟು ಮೆರುಗು ನೀಡಿದ್ದಾರೆ.

ರಾಮರಸ ಚಿತ್ರದಲ್ಲಿ ಬಿಗ್ ಬಾಸ್ ಕನ್ನಡ ವಿಜೇತ ಕಾರ್ತಿಕ್ ಮಹೇಶ್, ಪ್ರಜ್ವಲ್ ದೇವರಾಜ್, ಶರಣ್, ಮತ್ತು ಹೆಬ್ಬಾ ಪಟೇಲ್ ಇದ್ದಾರೆ. ಗುರು ದೇಶಪಾಂಡೆ ಮತ್ತು ವಿಕ್ರಂ ಆರ್ಯ ಅವರು ಈ ಚಿತ್ರವನ್ನು ಜಿ ಸಿನಿಮಾಸ್ ಪ್ರೊಡಕ್ಷನ್ ಸೆವೆನ್ ಸ್ಟಾರ್ ಮೂವೀಸ್ ಅಸೋಸಿಯೇಷನ್ ನೊಂದಿಗೆ ನಿರ್ಮಿಸುತ್ತಿದ್ದಾರೆ. ಈ ಚಿತ್ರಕ್ಕೆ ಸದ್ಯ ಅತ್ಯುನ್ನತ ಮಟ್ಟದ ಎಡಿಟಿಂಗ್, ಗ್ರಾಫಿಕ್ಸ್ (ಗಿಈಫಿ) ಮತ್ತು ಸೌಂಡ್ ಡಿಸೈನಿಂಗ್ ಕೆಲಸಗಳು ನಡೆಯುತ್ತಿದ್ದು, ಪ್ರೇಕ್ಷಕರಿಗೆ ದೃಶ್ಯ ವೈಭವದ ಅನುಭವ ನೀಡಲು ತಂಡ ಶ್ರಮಿಸುತ್ತಿದೆ. ಪೋಸ್ಟ್-ಪ್ರೊಡಕ್ಷನ್ ಕೆಲಸಗಳು ಭರದಿಂದ ಸಾಗುತ್ತಿವೆ. ಶೀಘ್ರದಲ್ಲೇ ಚಿತ್ರದ ಅಧಿಕೃತ ಟೀಸರ್ ಬಿಡು